ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

ಮಾಸಪತ್ರಿಕೆ
ಸಂಪುಟ 3, ಸಂಚಿಕೆ 11, ಸೆಪ್ಟೆಂಬರ್ 2025
SHRIDEVI ANTARANGA
Monthly Magazine




ಸಂಪಾದಕರು: ಡಾ. ಎಂ.ಆರ್. ಹುಲಿನಾಯ್ಕರ್ ಗೌರವ ಸಂಪಾದಕರು: ಡಾ. ಕೆ.ಆರ್.ಕಮಲೇಶ್ ಕಾರ್ಯನಿರ್ವಾಹಕ ಸಂಪಾದಕರು: ಡಾ. ರಮಣ ಎಂ. ಹುಲಿನಾಯ್ಕರ್ ಇಂಗ್ಲಿಷ್ ಆವೃತ್ತಿ ಸಂಪಾದಕರು: ಕೃಷ್ಣ ವಿ.



**ಸಂಪಾದಕರ ಅಂತರಂಗ**


ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

**ಜಿಎಸ್‌ಟಿ ಸುಧಾರಣೆಗಳು ಸಾಮಾನ್ಯ ಜನತೆಯ ಜೀವನದ ಹೊರೆಯನ್ನು ಸಾಕಷ್ಟು ಮಟ್ಟಿಗೆ ಕಡಮೆ ಮಾಡುವ ಅವಕಾಶಗಳಿಗೆ ಬಾಗಿಲನ್ನು ತೆರೆದಿದೆ ಮತ್ತು ದೇಶದಲ್ಲಿ ನಡೆಯುವ ವ್ಯಾಪಾರ ವಹಿವಾಟುಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡುತ್ತದೆ.**

## ಜಿ.ಎಸ್.ಟಿ. ಸುಧಾರಣೆಗಳು

### ಸಾಮಾನ್ಯ ಜನತೆಗೆ ಅನುಕೂಲ ಮತ್ತು ಉತ್ಪಾದನೆಗೆ ಉತ್ತೇಜನ

ಕೇಂದ್ರದಲ್ಲಿ ಯುಪಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಜಿಎಸ್‌ಟಿ ಕಾನೂನುಗಳನ್ನು ರೂಪಿಸಲಾಯಿತು. 2014ರಲ್ಲಿ ಅಧಿಕಾರಕ್ಕೆ ಪ್ರಧಾನಿ ನರೇಂದ್ರ ಮೋದಿ ಸರ್ಕಾರ 2017ರಲ್ಲಿ ಜಿಎಸ್‌ಟಿಯನ್ನು ಅನುಷ್ಠಾನ ಮಾಡಿತು. ಜಿಎಸ್‌ಟಿ ಮಂಡಲಿಗೆ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು ಶಾಶ್ವತ ಸದಸ್ಯರಾಗಿರುತ್ತಾರೆ. ನಮ್ಮ ರಾಜ್ಯದಿಂದ ಸಿದ್ದರಾಮಯ್ಯ ನೇತೃತ್ತ್ವದ ಸರ್ಕಾರದಲ್ಲಿ ಕೃಷ್ಣ ಭೈರೇಗೌಡ ಅವರು ಈ ಮಂಡಲಿಯ ಸದಸ್ಯರಾಗಿದ್ದರು. ಪ್ರಸ್ತುತ ಅವರೇ ಸದಸ್ಯರು. ಹಿಂದೆ ಬಿಜೆಪಿ ಸರ್ಕಾರದಲ್ಲಿ ಬಸವರಾಜ ಬೊಮ್ಮಾಯಿ ಕರ್ನಾಟಕದಿಂದ ಈ ಮಂಡಲಿಯ ಸದಸ್ಯರಾಗಿದ್ದರು. ಪ್ರಾರಂಭದ ಐದು ವರ್ಷಗಳಲ್ಲಿ ಜಿಎಸ್‌ಟಿಯಿಂದ ರಾಜ್ಯಗಳಿಗೆ ಆದ ನಷ್ಟವನ್ನು ಕೇಂದ್ರವು ತುಂಬಿಕೊಟ್ಟಿತ್ತು. ಪ್ರಸ್ತುತ ಎರಡನೆಯ ಹಂತದ ಜಿಎಸ್‌ಟಿ ಸುಧಾರಣೆಗೆ ಕಾರಣೀಭೂತರು ಕೇಂದ್ರ ಸರ್ಕಾರ ಹಣಕಾಸು ಸಚಿವರಾಗಿರುವ ಶ್ರೀಮತಿ ನಿರ್ಮಲ ಸೀತಾರಾಮನ್ ಅವರು.



2017ರಲ್ಲಿ ಪರಿಚಯಿಸಲ್ಪಟ್ಟಿದ್ದ ಸರಕು ಮತ್ತು ಸೇವಾ ತೆರಿಗೆಗಳು (GST), ಸ್ವಾತಂತ್ರ್ಯದ ಅನಂತರ ಭಾರತದ ಅತ್ಯಂತ ಪ್ರಮುಖ ಪರೋಕ್ಷ ತೆರಿಗೆಗಳ ಸುಧಾರಣೆಯಾಗಿತ್ತು. GST ಜಾರಿಗೆ ಬರುವ ಮೊದಲು ಭಾರತದಲ್ಲಿ ಪರೋಕ್ಷ ತೆರಿಗೆಗಳ ವ್ಯವಸ್ಥೆ ತೀವ್ರವಾದ ಗೊಂದಲಗಳಿಂದ ಕೂಡಿತ್ತು. ಪ್ರತಿಯೊಂದು ರಾಜ್ಯವೂ ತನ್ನದೇ ಆಗಿದ್ದ ದರಗಳನ್ನು, ಮೇಲ್ತೆರಿಗೆಗಳನ್ನು ಮತ್ತು ಪಾವತಿಯ ನಿಯಮಗಳನ್ನು ಅನುಸರಿಸುತ್ತಿತ್ತು. ಹಾಗೂ ಉತ್ಪಾದಕರು ಮತ್ತು ವಹಿವಾಟುದಾರರು ಪದೇ ಪದೇ ಬದಲಾಗುತ್ತಿದ್ದ ತೆರಿಗೆಯ ನಿಯಮಗಳನ್ನು ಅನುಸರಿಸುವುದು, ಆಯಾ ರಾಜ್ಯದಲ್ಲಿಯೇ ನಡೆಸುವ ವಹಿವಾಟಿಗೆ ರಾಜ್ಯದ ತೆರಿಗೆಗಳನ್ನು, ರಾಜ್ಯ ರಾಜ್ಯಗಳ ನಡುವೆ ನಡೆಸುವ ವ್ಯಾಪಾರ ವಹಿವಾಟುಗಳಿಗೆ ಕೇಂದ್ರವು ವಿಧಿಸುತ್ತಿದ್ದ ಹೆಚ್ಚುವರಿ ತೆರಿಗೆಯನ್ನು ಪಾವತಿಸುವುದು ಬಹಳ ತುಟ್ಟಿಯೂ, ತ್ರಾಸದಾಯಕವೂ ಆಗಿದ್ದವು. GSTಯು ಜಾರಿಗೆ ಬಂದ ಅನಂತರ ತೆರಿಗೆಯ ನಿಯಮಗಳು, ದರಗಳು ದೇಶದಾದ್ಯಂತ ಏಕರೂಪವಾಗಿದ್ದು, ಇಡೀ ದೇಶಕ್ಕೆ ಒಂದೇ ಮಾರುಕಟ್ಟೆಯು ಸೃಷ್ಟಿಯಾಯಿತು. ಇದರಿಂದ, ತೆರಿಗೆಯ ಮೇಲೆ ತೆರಿಗೆಯನ್ನು ಕಟ್ಟುವ ಹಾಗೂ ಅಂತಿಮವಾಗಿ ಬಳಕೆದಾರರ ಮೇಲೆ ಹೆಚ್ಚಿನ ತೆರಿಗೆಯನ್ನು ವಿಧಿಸುತ್ತಿದ್ದ ಪರಿಸ್ಥಿತಿಯು ಚರಿತ್ರೆಯ ಪುಟಗಳಲ್ಲಿ ಸೇರಿಹೋಯಿತು ಮತ್ತು ತೆರಿಗೆಯ ವ್ಯವಸ್ಥೆಯಲ್ಲಿ ಅತ್ಯಗತ್ಯವಾಗಿದ್ದ ಪಾರದರ್ಶಕತೆಯು ಜಾರಿಗೆ ಬಂದಿತು. ಇದರ ಜೊತೆಯಲ್ಲಿಯೇ ಡಿಜಿಟಲ್ ಕ್ರಾಂತಿಯಿಂದಾಗಿ ವಹಿವಾಟುಗಳು ಸುಲಭವಾಗಿ ನಡೆಯಲಾರಂಭಿಸಿದವು. GSTಯ ಮಹತ್ತ್ವವನ್ನು ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಅದು ದೇಶದ ಪರೋಕ್ಷ ತೆರಿಗೆಯ ವ್ಯವಸ್ಥೆಗೆ ಒಂದು ಮುಖ್ಯವಾದ ಆಧಾರ ಸ್ತಂಭವಾಗಿದೆ.

GSTಯು ಜಾರಿಗೆ ಬಂದ ಎಂಟು ವರ್ಷಗಳ ಅನಂತರ ಕೇಂದ್ರ ಸರ್ಕಾರವು ಎಲ್ಲ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಹಣಕಾಸು ಸಚಿವರ ಬೆಂಬಲದೊಂದಿಗೆ ಪರೋಕ್ಷ ತೆರಿಗೆಯ ದರಗಳನ್ನು ಸರಳೀಕರಿಸಲು ಅನನ್ಯ ಹೆಜ್ಜೆಯನ್ನು ಇಟ್ಟಿದೆ. ಈ ಸುಧಾರಣೆಯ ಉದ್ದೇಶವು ಹಲವಾರು ವಸ್ತುಗಳ ಹಾಗೂ ಸೇವೆಗಳ ಮೇಲಿನ ಕೇವಲ ತೆರಿಗೆಯ ದರಗಳನ್ನು ಕಡಮೆ ಮಾಡುವುದಷ್ಟಕ್ಕೇ ಸೀಮಿತವಾಗಿಲ್ಲ.

▶▶ 2ನೇ ಪುಟಕ್ಕೆ...

## ಡಾ.ಬಿ.ಆರ್.ಜಯಮ್ಮ ಅವರಿಗೆ ಶ್ರೀದೇವಿ ರಮಣ ಮಹರ್ಷಿ ಪ್ರಶಸ್ತಿ 2025




ಶ್ರೀದೇವಿ ರಮಣ ಮಹರ್ಷಿ ಪುರಸ್ಕಾರ ಪ್ರದಾನ ಸಮಾರಂಭದ ಉದ್ಘಾಟನೆ.



▪ ಕೆ.ಎಸ್. ರಾಜಮನ್ನಾರ್
ಹಿರಿಯ ಪತ್ರಕರ್ತರು

### ನೈತಿಕ ಮಾರ್ಗವೇ ಆರೋಗ್ಯಕರ ಸಮಾಜದ ಜೀವಾಳ

"ನೈತಿಕಮಾರ್ಗವೇ ಆರೋಗ್ಯಕರ ಸಮಾಜದ ಜೀವಾಳ. ಅದೇ ಅಧ್ಯಾತ್ಮ ಶಕ್ತಿಯ ಬೀಜಮಂತ್ರ". ಈ ಮಾತನ್ನು ಹೇಳಿದವರು ಬೆಂಗಳೂರಿನ ರಾಮಕೃಷ್ಣ ಯೋಗಾಶ್ರಮದ ಸ್ವಾಮಿ ಯೋಗೀಶ್ವರಾನಂದ ಅವರು. ತುಮಕೂರಿನ ಶ್ರೀದೇವಿ ಕಾಲೇಜಿನಲ್ಲಿ ಸೆಪ್ಟಂಬರ್ 6 ರಂದು ಏರ್ಪಡಿಸಿದ್ದ 2025ನೇ ಸಾಲಿನ ಶ್ರೀದೇವಿ ರಮಣ ಮಹರ್ಷಿ ಪುರಸ್ಕಾರ ಪ್ರದಾನ ಮತ್ತು ಡಾ. ಕೆ.ಆರ್. ಕಮಲೇಶ್ ರಚಿಸಿರುವ "ಅವಧೂತ ಗಟ್ಟಹಳ್ಳಿ ಶ್ರೀ ಅಂಜನಪ್ಪಸ್ವಾಮಿಗಳು ಮತ್ತು ಅವರ ಪರಂಪರೆ" ಕುರಿತ ಕೃತಿಯ ಲೋಕಾರ್ಪಣೆ ಸಮಾರಂಭದಲ್ಲಿ ಸ್ವಾಮೀಜಿ ಅವರು ಭಾರತದ ಅಧ್ಯಾತ್ಮಶಕ್ತಿಯನ್ನು ಕುರಿತು ಮಾತನಾಡುತ್ತಿದ್ದರು.

ಮುಂದುವರಿದು ಅವರು "ವಿಶೇಷವಾಗಿ ಶಿಕ್ಷಕರು, ವೈದ್ಯರು, ನೈತಿಕಮಾರ್ಗದಲ್ಲಿ ನಡೆದರೆ ಅಂತಹ ಸಮಾಜವನ್ನು ಯಾರಿಂದಲೂ ಹಾಳುಮಾಡಲು ಸಾಧ್ಯವಿಲ್ಲ. ಆದರೆ, ಇಂದು ಭೋಗಜೀವನಕ್ಕೆ ಜೋತು ಬಿದ್ದು, ಹಣಕ್ಕೆ ಆದ್ಯತೆ ನೀಡಿದ ಕಾರಣ ಭಾರತ ಕಡು ಭ್ರಷ್ಟದೇಶ ಎಂಬ ಕಳಂಕ ಅಂಟಿಕೊಂಡಿದೆ. ಸಮಾಜ ಹೆಮ್ಮೆಪಡುವಂತಹ ಆದರ್ಶವ್ಯಕ್ತಿಗಳನ್ನು ರೂಪಿಸಬೇಕಾದ ಶಿಕ್ಷಣ ಸಂಸ್ಥೆಗಳು, ತಮ್ಮ ಮೌಲ್ಯಗಳನ್ನೇ ಮರೆತು, ಹಣ ಮಾಡುವುದನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿವೆ. ಇನ್ನು ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಮಾನವೀಯತೆ ಕಣ್ಮರೆಯಾಗಿ, ಮನುಷ್ಯರ ಜೀವಕ್ಕಿಂತ ಕಾಂಚಾಣವೇ ಪ್ರಧಾನವಾಗುತ್ತಿದೆ. ಸಮಾಜವನ್ನು ಸರಿದಾರಿಗೆ ತರಬೇಕಾಗಿರುವ ವೈದ್ಯರು ಮತ್ತು ಶಿಕ್ಷಕರೇ ಅಪಮಾರ್ಗ ಹಿಡಿದರೆ ಒಳ್ಳೆಯ ಸಮಾಜ, ಒಳ್ಳೆಯ ಮೌಲ್ಯವನ್ನು ಯಾರಿಂದ ನಿರೀಕ್ಷಿಸಲು ಸಾಧ್ಯ"?

"ಇದಕ್ಕೆ ಅಪವಾದ ಎನ್ನುವಂತೆ ಶ್ರೀದೇವಿ ಹೆಸರಿನ ಶಿಕ್ಷಣ ಸಂಸ್ಥೆಗಳನ್ನು ಮತ್ತು ಕಾಲೇಜಿನ ಅಂಗಳದಲ್ಲಿ ಶ್ರೀದುರ್ಗಾಂಬಿಕಾದೇವಿಯ ದೇವಾಲಯ ಸ್ಥಾಪನೆ ಮಾಡಿ, ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಅಧ್ಯಾತ್ಮ ಬದುಕಿಗೆ ಡಾ.ಹುಲಿನಾಯ್ಕರ್ ದಂಪತಿಗಳು ನಾಂದಿ ಹಾಡಿದ್ದಾರೆ."

> "ಕಾಳಿಕಾಮಾತೆಯ ಅನುಗ್ರಹದಿಂದ ಕುರಿಗಾಹಿಯಾಗಿದ್ದ ಕಾಳಿದಾಸ ಕವಿರತ್ನ ಎಂಬ ಬಿರುದು ಪಡೆದು ಮೇರುವ್ಯಕ್ತಿಯಾದರು. ಕನಕದಾಸರು ತಮ್ಮ ಭಕ್ತಿಯಿಂದ ಉಡುಪಿಯ ಶ್ರೀಕೃಷ್ಣನನ್ನೇ ತಮ್ಮ ಕಡೆಗೆ ತಿರುಗಿಸಿಕೊಂಡವರು. ಆಧ್ಯಾತ್ಮ ಮತ್ತು ಅವಧೂತ ಪರಂಪರೆ ನಮ್ಮ ಮುಂದಿನ ಪೀಳಿಗೆಯ ಆಸ್ತಿಯಾಗಬೇಕು ಅದನ್ನು ಉಳಿಸಿ–ಬೆಳೆಸುವ ಹೊಣೆಗಾರಿಕೆಯು ಸಮಾಜ ಅದರಲ್ಲಿಯೂ ನಮ್ಮ ಧಾರ್ಮಿಕ ಮುಖಂಡರ ಮೇಲಿದೆ. ಇಂತಹ ಸತ್ಕಾರ್ಯಗಳಿಗೆ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಹುಲಿನಾಯ್ಕರ್ ಸದಾ ಒತ್ತಾಸೆ ನೀಡುತ್ತಿದ್ದಾರೆ. ಶ್ರೀದೇವಿ ಶಿಕ್ಷಣ ಸಂಸ್ಥೆ ಖಾಸಗಿ ವಿಶ್ವವಿದ್ಯಾನಿಲಯವಾಗುವ ಎಲ್ಲ ಗುಣಲಕ್ಷಣ ಪಡೆದಿದೆ. ಈ ಸಂಸ್ಥೆಗೆ ಖಾಸಗಿ ವಿಶ್ವವಿದ್ಯಾನಿಲಯದ ಮಾನ್ಯತೆ ಬೇಗ ದೊರೆಯಲೆಂದು ನಾನು ಆಶಿಸುತ್ತೇನೆ.
>
> – ಎಚ್.ಎಂ. ರೇವಣ್ಣ
> ಕರ್ನಾಟಕ ಸರ್ಕಾರದ ಗ್ಯಾರಂಟಿ ಸಮಿತಿ ಅಧ್ಯಕ್ಷರು ಮತ್ತು ಮಾಜಿ ಸಚಿವ

"ಭೋಗಜೀವನವನ್ನು ತ್ಯಜಿಸುತ್ತಿರುವ ವಿದೇಶಿಯರು ಭಾರತದ ಯೋಗ, ಧ್ಯಾನ, ಅಧ್ಯಾತ್ಮ ಮುಂತಾದ ವಿಚಾರಗಳನ್ನು ಒಪ್ಪಿಕೊಂಡು, ಅದರ ಬಗ್ಗೆ ಆಸಕ್ತಿ ತೋರುತ್ತಿದ್ದಾರೆ. ಇದಕ್ಕಾಗಿ ದೊಡ್ಡ ಮಟ್ಟದ ತ್ಯಾಗ ಮಾಡುತ್ತಿದ್ದಾರೆ. ಕೋಟ್ಯಂತರ ರೂಪಾಯಿ ಸಂಬಳದ ಕೆಲಸವನ್ನು ಬಿಟ್ಟು, ನೆಮ್ಮದಿ ಕಂಡುಕೊಳ್ಳಲು ಭಾರತದ ಕಡೆ ನೋಡುತ್ತಿದ್ದಾರೆ. ಇದು ಭಾರತದ ಅಧ್ಯಾತ್ಮಶಕ್ತಿ, ಆದರೆ ನಮ್ಮ ಜನ ಇದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಬೇರೆ ಕಡೆಗೆ ನೋಡುತ್ತಿದ್ದಾರೆ, ಇದು ನಿಜಕ್ಕೂ ವೈರುಧ್ಯ ಹಾಗೂ ದುರಂತ.

"ನಮ್ಮ ಜನರು ಭೋಗಜೀವನವೇ ಪರಮ ಗುರಿ, ಆದ್ಯತೆ ಎಂದುಕೊಂಡು ಹಣದಾಸೆಗೆ ಬಿದ್ದು ನೈತಿಕಮಾರ್ಗ ತೊರೆದು ಸಮಾಜದಲ್ಲಿ ಅಶಾಂತಿ, ಹರಡಲು ಕಾರಣರಾಗಿದ್ದಾರೆ. ಈ ದೇಶದ ಅನೇಕ ಸಾಧುಸಂತರು, ಶಾಲೆ ಮೆಟ್ಟಿಲನ್ನೂ ಹತ್ತದ ಅವಿದ್ಯಾವಂತರಾಗಿದ್ದರು.

▶▶ 8ನೇ ಪುಟಕ್ಕೆ...

# ಜಿ.ಎಸ್.ಟಿ. ಸುಧಾರಣೆಗಳು

▶▶ ಮೊದಲನೇ ಪುಟದಿಂದ

ಅದರ ಜೊತೆಗೆ, ಸಾಮಾನ್ಯ ಜನತೆಯ ಜೀವನದ ಹೊರೆಯನ್ನು ಸಾಕಷ್ಟು ಮಟ್ಟಿಗೆ ಕಡಮೆ ಮಾಡುವ ಅವಕಾಶಗಳಿಗೆ ಬಾಗಿಲನ್ನು ತೆರೆದಿದೆ ಮತ್ತು ದೇಶದಲ್ಲಿ ನಡೆಯುವ ವ್ಯಾಪಾರ ವಹಿವಾಟುಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡುತ್ತದೆ. ಇಷ್ಟೇ ಅಲ್ಲದೆ, GSTಗಾಗಿ ನೋಂದಣಿ ಮಾಡಿಸುವ ವಿಧಾನವನ್ನು ಮತ್ತು ತೆರಿಗೆಗಳನ್ನು ಪಾವತಿ ಮಾಡುವ ಕ್ರಮಗಳನ್ನು ಸರಳಗೊಳಿಸಲೂ ಇದು ಉದ್ದೇಶಿಸಿದೆ. ಈ ಕಾರಣಕ್ಕಾಗಿ ಈವರೆಗೆ ಇದ್ದ ಹಲವಾರು ವರ್ಗಗಳನ್ನು ಕಡಮೆ ಮಾಡಿ ಮುಖ್ಯವಾಗಿ ಎರಡು ವರ್ಗಗಳನ್ನಾಗಿ (5% ಮತ್ತು 18% ತೆರಿಗೆಯ ದರದ ಅಡಿಯಲ್ಲಿ:) ವಿಂಗಡಿಸಲಾಗಿದೆ. ಇದರಿಂದ ಹಿಂದಿನ ಪದಾರ್ಥಗಳ ವರ್ಗೀಕರಣದಲ್ಲಿ ಇದ್ದ ಗೊಂದಲವನ್ನೂ ನಿವಾರಿಸಲಾಗಿದೆ. ಕೆಲವು ವಸ್ತುಗಳ ಮೇಲಿನ ತೆರಿಗೆಯನ್ನು ಸಂಪೂರ್ಣವಾಗಿ ತೆಗೆದು ಹಾಕಿರುವುದರಿಂದ, ಅವುಗಳ ಖರೀದಿಯು ಬಹಳ ಅಗ್ಗವಾಗಲಿದೆ. ಈ ಕ್ರಮಗಳಿಂದಾಗಿ ಹೊಸದಾಗಿ ಜಾರಿಗೆ ಬರಲಿರುವ ತೆರಿಗೆಯ ವ್ಯವಸ್ಥೆಯ ಲಾಭವು ದೇಶದ ಎಲ್ಲಾ ಜನರಿಗೂ ದೊರೆಯುತ್ತದೆ.

**ಸುಧಾರಣೆಯ ಉದ್ದೇಶ:**

- GST ಸಮಿತಿಯ ಪ್ರಕಾರ, ನವೀನ ಸುಧಾರಣೆಯಲ್ಲಿ ಮುಖ್ಯವಾಗಿ ಎರಡೇ ವರ್ಗಗಳಿದ್ದು, ಜನತೆಯ ಮೇಲೆ ನ್ಯಾಯಯುತವಾದ ದರದಲ್ಲಿ ತೆರಿಗೆಯನ್ನು ವಿಧಿಸುವುದು.
- ಡಿಜಿಟಲ್ ವಿಧಾನವನ್ನು ಸರಳೀಕರಿಸಿ ಪಾವತಿಯ ಪ್ರಕ್ರಿಯೆಯನ್ನು ಸರಳಗೊಳಿಸುವುದು ಮತ್ತು ಪಾರದರ್ಶಕಗೊಳಿಸುವುದು.
- ತೆರಿಗೆಯನ್ನು ಪಾವತಿಸುವಂತೆ ತೆರಿಗೆದಾರರನ್ನು ಉತ್ತೇಜಿಸಲು, ಅಗತ್ಯ ವಸ್ತುಗಳು ಮತ್ತು ಹೆಚ್ಚಿನ ಬೆಲೆಯ ವಸ್ತುಗಳ ಮೇಲಿನ ತೆರಿಗೆಗಳ ದರವನ್ನು ಕಡಮೆಗೊಳಿಸುವುದು.
- ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ದಿಮೆಗಳಿಗೆ ಅವುಗಳ ಉತ್ಪನ್ನಗಳ ಮೇಲಿನ ತೆರಿಗೆಯನ್ನು ಕಡಮೆ ಮಾಡಿ, ಆ ಉತ್ಪನ್ನಗಳು ಸ್ಪರ್ಧಾತ್ಮಕವಾಗಿರುವಂತೆ ಮಾಡುವುದು. ಈ ಉದ್ದಿಮೆಗಳ ಉತ್ಪನ್ನದ ತೆರಿಗೆಯನ್ನು ಕಡಮೆಗೊಳಿಸುವುದರಿಂದ ಅವುಗಳಿಗೆ ಬೇಡಿಕೆಯನ್ನು ಹೆಚ್ಚಿಸಿ ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ದಿಮೆಗಳ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಿಸುವುದು.
- ತೆರಿಗೆ ಪಾವತಿದಾರ ಸಂಖ್ಯೆಯನ್ನು ಹೆಚ್ಚಿಸುವ ಮೂಲಕ ದೇಶದಲ್ಲಿನ ತೆರಿಗೆ ಸಂಗ್ರಹದ ಮಟ್ಟವನ್ನು ಹೆಚ್ಚಿಸುವುದು.
- ಉದ್ದೇಶಿತ ಸರಳೀಕರಣದ ಮೂಲಕ ಸಣ್ಣ ಉದ್ದಿಮೆದಾರರನ್ನು ತೆರಿಗೆಯ ವ್ಯಾಪ್ತಿಗೆ ತರುವುದು.
- ಮರುಪಾವತಿ ಪಡೆಯಬೇಕಾದ ಸಂದರ್ಭಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆಗಳನ್ನು ಸರಳಗೊಳಿಸಿ ಮರುಪಾವತಿಯು ಶೀಘ್ರವಾಗಿ ನಡೆಯುವಂತೆ ಮಾಡುವುದು.
- ತೆರಿಗೆಯನ್ನು ಕಡಮೆ ಮಾಡುವ ಮೂಲಕ, ವಸ್ತುಗಳ ಬೇಡಿಕೆಯು ಹೆಚ್ಚಾಗಿ, ಜನತೆಯು ಸ್ವದೇಶೀ ಉತ್ಪನ್ನಗಳನ್ನೇ ಹೆಚ್ಚಾಗಿ ಅವಲಂಬಿಸುತ್ತಾರೆ ಮತ್ತು ಇದರಿಂದ ವಿದೇಶಗಳ ಮೇಲಿನ ಅವಲಂಬನೆ ಕಡಮೆಯಾಗುತ್ತದೆ.

**ನೈಜ ಪರಿಸ್ಥಿತಿಯ ವಿಶ್ಲೇಷಣೆ:**

ಆಹಾರ, ಕ್ಷೀರೋತ್ಪನ್ನಗಳು, ಬ್ರೆಡ್, ಜೀವವಿಮೆ ಮತ್ತು ಆರೋಗ್ಯವಿಮೆ ಮತ್ತು ಜೀವರಕ್ಷಕ ಔಷಧಿಗಳು, ಮೊದಲಾದ ಅಗತ್ಯ ವಸ್ತುಗಳನ್ನು ಮತ್ತು ಸೇವೆಗಳನ್ನು ತೆರಿಗೆ-ರಹಿತ ಪಟ್ಟಿಗೆ ಅಥವಾ ಕಡಮೆ ತೆರಿಗೆಯ ಪಟ್ಟಿಗೆ ಸೇರಿಸಲಾಗಿದೆ. ಇದರಿಂದ ಜನಸಾಮಾನ್ಯರ ಮಾಸಿಕ ವೆಚ್ಚವು



ಖಂಡಿತವಾಗಿಯೂ ಕಡಮೆಯಾಗಲಿದೆ. ಹೊಸ ತೆರಿಗೆಗಳ ಅಡಿಯಲ್ಲಿ, ಗೃಹೋಪಕರಣಗಳು, ಎಲೆಕ್ಟ್ರಾನಿಕ್ ಉಪಕರಣಗಳು, ಸಿಮೆಂಟ್ ಮತ್ತು ವಾಹನಗಳು ಮತ್ತು ಅವುಗಳ ಬಿಡಿಭಾಗಗಳ ಬೆಲೆಯೂ ಸಹನೀಯ ಮಟ್ಟಕ್ಕೆ ಇಳಿಯುತ್ತವೆ. ಇದರಿಂದ ದೇಶದಲ್ಲಿ ಉತ್ಪಾದನೆಯಾಗುವ ಪದಾರ್ಥಗಳ ಬಳಕೆ ದೇಶದ ಒಳಗೆ ಹೆಚ್ಚುವುದಷ್ಟೇ ಅಲ್ಲದೆ, ಅವುಗಳ ಉತ್ಪಾದನೆಯೂ ಹೆಚ್ಚಿ ದೇಶದ ಆರ್ಥಿಕ ಚಟುವಟಿಕೆಗಳಿಗೆ, ನಿರ್ಮಾಣ ಕಾರ್ಯಗಳಿಗೆ ಪ್ರೋತ್ಸಾಹದೊರೆತು, ಉದ್ಯೋಗಾವಕಾಶಗಳು ಹೆಚ್ಚಾಗುತ್ತವೆ. ಇವೆಲ್ಲದರ ಪರಿಣಾಮವಾಗಿ, ಈಗಾಗಲೇ ನಿಯಂತ್ರಣದಲ್ಲಿರುವ ಹಣದುಬ್ಬರದ ಪ್ರಮಾಣವು ಮತ್ತಷ್ಟು ಕಡಮೆಯಾಗುತ್ತದೆ.

**ಪರಿಷ್ಕೃತ ತೆರಿಗೆ ದರಗಳ ಒಂದು ಸ್ಥೂಲ ನೋಟ:**

- ಸಾಬೂನು, ಟೂತ್‌ಪೇಸ್ಟ್, ಬ್ರೆಡ್ ಮೊದಲಾದ ಹಲವು ಗೃಹಬಳಕೆಯ ಪದಾರ್ಥಗಳ ಮೇಲಿನ ತೆರಿಗೆಯನ್ನು ಶೇಕಡ 5ಕ್ಕೆ ಇಳಿಸಲಾಗಿದೆ ಅಥವಾ ತೆರಿಗೆ-ರಹಿತ ಪದಾರ್ಥಗಳ ಸಾಲಿಗೆ ಸೇರಿಸಲಾಗಿದೆ – ಇದರಿಂದ ಸಾಮಾನ್ಯರಿಗೆ ಬಹಳಷ್ಟು ಅನುಕೂಲವಾಗುತ್ತದೆ.
- ಜೀವರಕ್ಷಕ ಔಷಧಿಗಳ ಮೇಲಿನ ತೆರಿಗೆಯನ್ನು ಶೇಕಡ ಹನ್ನೆರಡರಿಂದ ಶೇಕಡ ಐದಕ್ಕೆ ಇಳಿಸಿರುವುದು, ಆರೋಗ್ಯಕ್ಷೇತ್ರಕ್ಕೆ ನೀಡಿದ ಕೊಡುಗೆಯಾಗಿದೆ.
- ದ್ವಿಚಕ್ರ ವಾಹನಗಳು, ಸಣ್ಣ ಕಾರುಗಳು, ಟಿ.ವಿ.ಗಳು, ಮೊದಲಾದವುಗಳ ಮೇಲಿನ ತೆರಿಗೆಯು ಶೇ. ಇಪ್ಪತ್ತೆಂಟರಿಂದ ಶೇ. ಹದಿನೆಂಟಕ್ಕೆ ಇಳಿಯಲಿವೆ. ಇದರಿಂದ ಖರೀದಿದಾರರಿಗೆ ಶೇ. ಹತ್ತರಷ್ಟು ತೆರಿಗೆಯ ಹಣ ಉಳಿಯಲಿದೆ ಮತ್ತು ಎಲೆಕ್ಟ್ರಾನಿಕ್ಸ್, ವಾಹನಗಳ ಉತ್ಪಾದನಾ ವೆಚ್ಚವೂ ಕಡಮೆಯಾಗಲಿದೆ ಮತ್ತು ಈ ಪದಾರ್ಥಗಳ ಬೇಡಿಕೆಯು ಏರಲಿದೆ.
- ವ್ಯವಸಾಯೋಪಕರಣಗಳು, ನೀರಾವರಿಗೆ ಸಂಬಂಧಿಸಿದ ಉಪಕರಣಗಳ ತೆರಿಗೆಯಲ್ಲಿ ಶೇ. ಏಳರಷ್ಟು ಉಳಿತಾಯವಾಗಲಿದೆ – ಅಂದರೆ ತೆರಿಗೆಯು ಶೇ ಹನ್ನೆರಡರಿಂದ ಶೇಕಡ ಐದಕ್ಕೆ ಕಡಮೆಯಾಗುತ್ತದೆ.
- ಪ್ಯಾಕೇಜ್ಡ್ ಪದಾರ್ಥಗಳಾದ ನಮ್ಕೀನ್, ಭುಜಿಯಾ, ಸಾಸ್, ಚಾಕೊಲೇಟ್, ಕಾಫಿ ಮೊದಲಾದವುಗಳ ಮೇಲಿನ ತೆರಿಗೆಯು ಶೇ. ಹನ್ನೆರಡರಿಂದ ಅಥವಾ ಶೇ. ಹದಿನೆಂಟರಿಂದ ಶೇ. ಐದಕ್ಕೆ ಇಳಿಯಲಿವೆ.
- ನಿರ್ಮಾಣಕ್ಷೇತ್ರಕ್ಕೆ ಸಂಬಂಧಿಸಿದ ಪದಾರ್ಥಗಳ ಮೇಲಿನ ತೆರಿಗೆಯಲ್ಲಿನ ಇಳಿತವು ಹೀಗಿದೆ: ಸಿಮೆಂಟ್ (ಶೇ. ಇಪ್ಪತ್ತೆಂಟರಿಂದ ಶೇ. ಹದಿನೆಂಟು), ಅಮೃತಶಿಲೆ, ಗ್ರಾನೈಟ್ ಬ್ಲಾಕ್‌ಗಳು, ಇಟ್ಟಿಗೆ, ಪ್ಯಾಲೆಟ್‌ಗಳು (ಶೇ. ಹನ್ನೆರಡರಿಂದ ಶೇ. ಐದು). ಇದು ರಿಯಲ್ ಎಸ್ಟೇಟ್ ಕ್ಷೇತ್ರಕ್ಕೆ ಬೇಡಿಕೆಯನ್ನು ಮತ್ತು ಆ ಕ್ಷೇತ್ರದಲ್ಲಿನ ಉದ್ಯೋಗಾವಕಾಶಗಳನ್ನು ಹೆಚ್ಚಿಸಲಿದೆ.
- ಭೋಗವಸ್ತುಗಳು ಮತ್ತು ಅನಪೇಕ್ಷಣೀಯವಾದ ಮತ್ತು ಆರೋಗ್ಯಕ್ಕೆ ಹಾನಿಕಾರಕವಾದ ಪದಾರ್ಥಗಳಾದ ತಂಬಾಕು, ಪಾನ್‌ಮಸಾಲ, ಹಾಗೂ ಕೆಲವು ತಂಪು ಪಾನೀಯಗಳ ಮೇಲಿನ ಸುಂಕವನ್ನು ಶೇ ನಲವತ್ತಕ್ಕೆ ಏರಿಸಲಾಗಿದೆ.
- ತೆರಿಗೆ ಇಳಿಕೆಯ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ. ನೋಟ್‌ಪುಸ್ತಕಗಳು, ರಬ್ಬರ್ ಪೆನ್ಸಿಲ್, ಕ್ರೆಯಾನ್ಸ್, ಶಾರ್ಪನರ್‌ಗಳನ್ನು ತೆರಿಗೆಯ ಹೊರಗಿನಿಂದ ಮುಕ್ತಗೊಳಿಸಲಾಗಿದೆ ಮತ್ತು ಜ್ಯಾಮಿತಿಯ ಬಾಕ್ಸ್‌ಗಳ ಮೇಲಿನ ತೆರಿಗೆಯನ್ನು ಶೇ ಏಳರಷ್ಟು ಇಳಿಸಲಾಗಿದೆ.

**ಆರೋಗ್ಯ ಕ್ಷೇತ್ರಕ್ಕೆ ಆಗಲಿರುವ ಲಾಭಗಳು:**

ಔಷಧಗಳು ಮತ್ತು ವೈದ್ಯಕೀಯ ಉಪಕರಣಗಳ ಮೇಲಿನ ತೆರಿಗೆಗಳು ಕಡಮೆಯಾಗಲಿದ್ದು, ಆರೋಗ್ಯ ಸೇವೆಯ ಖರ್ಚು ಕಡಮೆಯಾಗಿ, ರೋಗಿಗಳ ಮೇಲಿನ ಹೊರೆ ಅಷ್ಟರ ಮಟ್ಟಿಗೆ ಕಡಮೆಯಾಗಲಿದೆ ಮತ್ತು ವೈದ್ಯಕೀಯ ಉಪಕರಣಗಳ ಉತ್ಪಾದನೆಗೆ ಇದು ನಿಶ್ಚಯವಾಗಿ ಒಂದು ವರವಾಗಲಿದೆ.

ಮೂವತ್ತು ಮೂರು ಜೀವರಕ್ಷಕ ಔಷಧಗಳು, ರೋಗನಿದಾನದಲ್ಲಿ ಬಳಸುವ ಉಪಕರಣಗಳ ಮೇಲೆ ಶೇ. ಹನ್ನೆರಡರಷ್ಟು ಇದ್ದ ತೆರಿಗೆಗಳನ್ನು ಈ ಸುಧಾರಣೆಗಳು ಜಾರಿಗೆ ಬಂದ ಅನಂತರ ವಿಧಿಸಲಾಗುವುದಿಲ್ಲ.

ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿ ಔಷಧಗಳ ಬೆಲೆ ಶೇ.ಏಳರಷ್ಟು ಕಡಮೆಯಾಗುತ್ತವೆ.

ಆಸ್ಪತ್ರೆಗಳಲ್ಲಿ ಬಳಸುವ ಆಮ್ಲಜನಕ, ಉಷ್ಣತಾಮಾಪಕ, ಶಸ್ತ್ರಚಿಕಿತ್ಸಾ ಉಪಕರಣಗಳ ಮೇಲೆ ಇದ್ದ ತೆರಿಗೆಗಳು ಶೇ ಹನ್ನೆರಡು ಮತ್ತು ಹದಿನೆಂಟರಿಂದ ಇನ್ನು ಮುಂದೆ ಶೇ. ಐದಕ್ಕೆ ಇಳಿಯಲಿವೆ ಹಾಗೂ ದಂತವೈದ್ಯದ ಮತ್ತು ಪಶುವೈದ್ಯದ ಉಪಕರಣಗಳು ಶೇ ಹದಿಮೂರಷ್ಟು ಅಗ್ಗವಾಗಲಿವೆ.

ಅಲ್ಲದೆ, ಜೀವವಿಮೆ ಮತ್ತು ಆರೋಗ್ಯ ವಿಮೆಯ ಮೇಲಿನ ತೆರಿಗೆ ವಿನಾಯತಿ ಜನರಿಗೆ ಆರೋಗ್ಯ ರಕ್ಷಣೆಯನ್ನು ಸುಲಭಗೊಳಿಸುತ್ತದೆ.

**ಪರೋಕ್ಷ ಪ್ರಯೋಜನಗಳು:**

ಹೊಸ ತೆರಿಗೆಯ ವ್ಯವಸ್ಥೆಯಿಂದ ಹಲವಾರು ಪ್ರಯೋಜನಗಳು ಪರೋಕ್ಷವಾಗಿ ದೊರೆಯಲಿವೆ:

- ಬದಲಾದ ತೆರಿಗೆ ವ್ಯವಸ್ಥೆಯು ನಮ್ಮ ದೇಶದ ಉತ್ಪನ್ನಗಳಿಗೆ ಆಂತರಿಕ ಹಾಗೂ ರಫ್ತು ಮಾರುಕಟ್ಟೆಯಲ್ಲಿ ಉತ್ತಮ ಅವಕಾಶಗಳನ್ನು ಒದಗಿಸಲಿದೆ.
- ಕಡಿತಗೊಳಿಸಿರುವ ತೆರಿಗೆಯ ದರಗಳಿಂದ ಪ್ರಾರಂಭದಲ್ಲಿ ರಾಜ್ಯಗಳ, ಕೇಂದ್ರಾಡಳಿತ ಪ್ರದೇಶಗಳ ಹಾಗೂ ಕೇಂದ್ರ ಸರ್ಕಾರಗಳ ರಾಜಸ್ವವು ಸ್ವಲ್ಪ ಕಡಮೆಯಾಗುತ್ತದೆ ಎನ್ನುವುದು ನಿಶ್ಚಯ. ಆದರೆ, ಈ ಹಿಂದೆ ತೆರಿಗೆಗಳನ್ನು ಕಡಮೆ ಮಾಡಿದಾಗ ನಮಗಾಗಿರುವ ಅನುಭವವನ್ನು ಆಧರಿಸಿ ಹೇಳುವುದಾದರೆ, ತೆರಿಗೆಗಳನ್ನು ಪಾವತಿಸುವ ಪ್ರಮಾಣ ಹೆಚ್ಚಾಗುತ್ತದೆ. ಇದಕ್ಕೆ ಕಾರಣ ನಮ್ಮ ಜನರ ಕೊಳ್ಳುವಿಕೆಯ ಸಾಮರ್ಥ್ಯ ಹೆಚ್ಚಾಗಿರುತ್ತದೆ. ಇದರಿಂದ ಆರ್ಥಿಕ ಬೆಳವಣಿಗೆಯೂ ಸತತವಾಗಿ ಹೆಚ್ಚಾಗುತ್ತದೆ.
- ಈಗ ಜಾರಿಯಲ್ಲಿರುವ ಆಯುಷ್ಮಾನ್ ಯೋಜನೆಯ ಜೊತೆಗೆ, ಹೊಸ ತೆರಿಗೆಗಳು ಜಾರಿಗೆ ಬಂದ ಅನಂತರ ಜೀವವಿಮೆ ಮತ್ತು ಆರೋಗ್ಯ ವಿಮೆಗಳ ಮೇಲಿನ ತೆರಿಗೆಗಳಿಗೆ ದೊರೆಯುವ ವಿನಾಯತಿಯಿಂದಾಗಿ ಜನತೆಗೆ ಆರೋಗ್ಯ ಭದ್ರತೆಯ ಅಡಿಪಾಯ ವಿಶಾಲವಾಗಿ ಅದರ ಲಾಭ ಹೆಚ್ಚು ಹೆಚ್ಚು ಜನರಿಗೆ ದೊರಕುತ್ತದೆ.

**ಪರಿಣತರ ಹಾಗೂ ಕಂಪನಿಗಳ ಮುಖ್ಯಾಧಿಕಾರಿಗಳ ಅಭಿಪ್ರಾಯಗಳು:**

ಉದ್ದಿಮೆಯಲ್ಲಿರುವ ಪರಿಣತರು ಹಾಗೂ ಮುಖ್ಯಾಧಿಕಾರಿಗಳು ಈ ಸುಧಾರಣೆಯನ್ನು ಕುರಿತು ಆಶಾಭಾವನೆಯನ್ನು ಹೊಂದಿದ್ದಾರೆ. ಅವರ ಪ್ರಕಾರ ಈ ಕ್ರಮಗಳಿಂದ ಉತ್ಪನ್ನಗಳು ಮಾರುಕಟ್ಟೆಯಲ್ಲಿ ಸುಲಭ ದರಗಳಲ್ಲಿ ದೊರೆಯುತ್ತವೆ ಮತ್ತು ಜನತೆಯಲ್ಲಿ ಕೊಳ್ಳುವ ಸಾಮರ್ಥ್ಯವನ್ನು ಹೆಚ್ಚು ಮಾಡಿ ಉದ್ದಿಮೆಗಳಿಗೆ ಉತ್ತಮ ಅವಕಾಶವನ್ನು ನೀಡುತ್ತವೆ. ಉತ್ಪಾದನೆ ಹೆಚ್ಚಿದಂತೆ ಉತ್ಪನ್ನಗಳ ಬೆಲೆಯೂ ಅಷ್ಟರ ಮಟ್ಟಿಗೆ ಕಡಮೆಯಾಗುತ್ತದೆ. ಇದನ್ನು ಪರಿಣತರ ಮತ್ತು ಉದ್ದಿಮೆಗಳ ಮುಖ್ಯಾಧಿಕಾರಿಗಳ ಮಾತಿನಲ್ಲಿಯೇ ಕೇಳಬಹುದು.

"ಹೊಸ ತೆರಿಗೆಯಿಂದಾಗಿ ಜೀವರಕ್ಷಕ ಹಾಗೂ ಇತರ ಅಗತ್ಯ ಔಷಧಿಗಳ ಬೆಲೆಯು ಕಡಮೆಯಾಗಿ ಆರೋಗ್ಯ ಸೇವೆಯನ್ನು ಕಡಮೆ ವೆಚ್ಚದಲ್ಲಿ ಪಡೆಯುವುದು ರೋಗಿಗಳಿಗೆ ಸಾಧ್ಯವಾಗುತ್ತದೆ ಮತ್ತು ಆರೋಗ್ಯ ಸೇವೆಯನ್ನು ನೀಡುತ್ತಿರುವ ಆಸ್ಪತ್ರೆಗಳು ಮತ್ತು ಔಷಧ ತಯಾರಿಕಾ ಕಂಪನಿಗಳು ಕೂಡ ಇದರ ಲಾಭವನ್ನು ಪಡೆಯಬಹುದು" ಎಂದು ಔಷಧಿ ತಯಾರಿಕಾ ಉದ್ದಿಮೆಯೊಂದರ ಮುಖ್ಯಾಧಿಕಾರಿಗಳು ಹೇಳಿದ್ದಾರೆ.

ಆರೋಗ್ಯ ಸೇವೆಯನ್ನೊದಗಿಸುವ ಇನ್ನೊಂದು ಸಂಸ್ಥೆಯ ಮುಖ್ಯಾಧಿಕಾರಿಯವರ ಅಭಿಪ್ರಾಯ ಹೀಗಿದೆ: "ಮೂವತ್ತು ಮೂರು ಜೀವರಕ್ಷಕ ಔಷಧಿಗಳಿಗೆ ಹಾಗೂ ಕ್ಯಾನ್ಸರ್ ಮತ್ತು ಅಪರೂಪದ ಖಾಯಿಲೆಗಳಿಗೆ ನೀಡುವ ಕೆಲವು ನಿರ್ದಿಷ್ಟ ಚಿಕಿತ್ಸಾ ಸೇವೆಯ ಮೇಲೆ ತೆರಿಗೆಯ ವಿನಾಯತಿಯನ್ನು ನೀಡಿರುವುದು, ಮತ್ತು ಹಲವಾರು ಔಷಧಿಗಳ ಮೇಲೆ ಇದುವರೆಗೆ ಇದ್ದ ಶೇ. ಹನ್ನೆರಡರಷ್ಟು ತೆರಿಗೆಯನ್ನು ಶೇ 5ಕ್ಕೆ ಇಳಿಸಿರುವುದು ಜನತೆಗೆ ನೀಡಿದ ಒಂದು ದೊಡ್ಡ ಕೊಡುಗೆಯಾಗಿದೆ".

"ಇದೊಂದು ರಚನಾತ್ಮಕ ಸುಧಾರಣೆಯಾಗಿದ್ದು ರೋಗಿಗಳ ಆರೋಗ್ಯದ ಮೇಲೆ ಧನಾತ್ಮಕವಾದ ಪರಿಣಾಮವನ್ನು ಬೀರಲಿದೆ ಮತ್ತು ಆರೋಗ್ಯಕ್ಷೇತ್ರದಲ್ಲಿರುವ ನಾವು ಈ ಅವಕಾಶವನ್ನು ಸಂಪೂರ್ಣವಾಗಿ ಬಳಸಿಕೊಂಡು ಅದರ ಲಾಭವನ್ನು ಸಾಮಾನ್ಯ ಜನತೆಗೆ ಪ್ರಾಮಾಣಿಕವಾಗಿ ವರ್ಗಾಯಿಸುವ ಆಶ್ವಾಸನೆಯನ್ನು ನೀಡುತ್ತೇವೆ."

"ತೆರಿಗೆಯ ವ್ಯವಸ್ಥೆಯಲ್ಲಿನ ಈ ಸುಧಾರಣೆಗಳಿಂದಾಗಿ ಹಾಗೂ ಈ ಹಿಂದೆ ಘೋಷಿಸಿರುವ ವರಮಾನ ತೆರಿಗೆಯ ರಿಯಾಯತಿಗಳಿಂದಾಗಿ ಜನತೆಯಲ್ಲಿ ಹೆಚ್ಚುವರಿ ಉಳಿತಾಯವುಂಟಾಗುತ್ತದೆ ಮತ್ತು ಇದರ ಲಾಭವನ್ನು ಜನತೆ ಶೀಘ್ರವಾಗಿ ಪಡೆಯಲಿದ್ದಾರೆ."

ದ್ವಿಚಕ್ರವಾಹನಗಳ ತಯಾರಿಕೆಯ ಒಂದು ಸಂಸ್ಥೆಯ ಮುಖ್ಯಾಧಿಕಾರಿಗಳು ಹೇಳಿರುವ ಮಾತು: "ಮುನ್ನೂರೈವತ್ತು ಸಿ.ಸಿ.ಗಿಂತ ಕಡಮೆ ಸಾಮರ್ಥ್ಯದ ಮೋಟರ್ ಬೈಕ್‌ಗಳ ಮಾರಾಟದ ಮೇಲಿನ ತೆರಿಗೆಯನ್ನು ಕಡಮೆ ಮಾಡಿರುವುದು ಅವುಗಳ ಬೇಡಿಕೆಯ ಪ್ರಮಾಣವನ್ನು ಹೆಚ್ಚಿಸುತ್ತದೆ."

▶▶ 5ನೇ ಪುಟಕ್ಕೆ...

ಪತ್ರಿಕೆಯ ಬಳಗ

ಸಹಾಯಕ ಸಂಪಾದಕರು
ಅಂಬಿಕಾ ಎಂ. ಹುಲಿನಾಯ್ಕರ್

ಸಂಯೋಜಕ ಸಂಪಾದಕರು
ಎಂ.ಎಸ್.ಪಾಟೀಲ್

ಸಲಹಾ ಸಂಪಾದಕರು
ಎನ್.ಭಾರತಿ

ಸಂಪಾದಕ ಮಂಡಲಿ
ಡಾ. ಭವಾನಿ ಸ್ಟಾಲಿನ್
ಡಾ. ಮನೋಜ್ಞಮಣಿ ಎಂ.ಎಚ್
ಡಾ. ಲಾವಣ್ಯ ರಮಣ

ಸಹಾಯಕ ಸಂಪಾದಕರು:
ಎನ್. ಆನಂದ

ಪುಟ ವಿನ್ಯಾಸ:
ಸುಮಾ ಸಾಗರ್

# ಶಾಲಾಮಕ್ಕಳ ಕಣ್ಣಿನಪೊರೆ ಸಮಸ್ಯೆ ನಿವಾರಣೆಯಲ್ಲಿ
# ಶ್ರೀದೇವಿ ಆಸ್ಪತ್ರೆಯ ಸಾರ್ಥಕ, ಮಾನವೀಯ ಸೇವೆ

▪ ಕೆ.ಎಸ್. ರಾಜಮನ್ನಾರ್

ಕಣ್ಣಿನಪೊರೆ ಸಮಸ್ಯೆ ಸಾಮಾನ್ಯವಾಗಿ ವಯಸ್ಕರು, ಹಿರಿಯ ನಾಗರಿಕರಲ್ಲಿ ಮಾತ್ರ ಕಾಣಿಸಿಕೊಳ್ಳುತ್ತದೆ ಎಂಬುದು ತಪ್ಪು ಕಲ್ಪನೆ. ಆದರೆ ಇತ್ತೀಚಿನ ದಿನಗಳಲ್ಲಿ ಪುಟ್ಟಮಕ್ಕಳಲ್ಲಿ ಸಹ ಈ ಸಮಸ್ಯೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ಅದರಲ್ಲೂ ವಿಶೇಷವಾಗಿ ಆರೋಗ್ಯ ಸೌಲಭ್ಯಗಳು, ಆಸ್ಪತ್ರೆಗಳಿಲ್ಲದ, ಗ್ರಾಮೀಣ ಪ್ರದೇಶಗಳ ಬಡ ಕುಟುಂಬಗಳಲ್ಲಿ ಈ ಸಮಸ್ಯೆ ಹೆಚ್ಚಾಗಿ ಕಂಡುಬರುತ್ತಿದೆ. ಲಕ್ಷಾಂತರ ರೂಪಾಯಿ ವೆಚ್ಚಮಾಡಿ ಚಿಕಿತ್ಸೆ ಕೊಡಿಸಲು ಸಾಧ್ಯವಾಗದ



ಕಣ್ಣಿನ ಪೊರೆಯ ಶಸ್ತ್ರ ಚಿಕಿತ್ಸೆ ಪಡೆದ ಮಕ್ಕಳೊಂದಿಗೆ ಡಾ.ಪ್ರವೀಣ್ ಕುಮಾರ್, ಕಾರ್ತಿಕ ಮತ್ತು ಸುಧಾ.

ಕಾರಣ ಅದೆಷ್ಟೋ ಮಕ್ಕಳು ಕತ್ತಲಕೂಪದಲ್ಲೇ ಕೊಳೆಯುತ್ತಿದ್ದಾರೆ. ಆ ಮಕ್ಕಳಿಗೆ ಪ್ರಪಂಚದ ಸೊಬಗನ್ನಾಗಲಿ, ಸೂರ್ಯನ ಬೆಳಕನ್ನಾಗಲಿ ನೋಡಲು ಸಾಧ್ಯವಾಗುವುದಿಲ್ಲ. ಇಂತಹ ಮಕ್ಕಳು ವಿದ್ಯಾಭ್ಯಾಸ ಸೇರಿದಂತೆ ಜೀವನದ ಎಲ್ಲ ರಂಗದಲ್ಲೂ ಹಿಂದೆ ಉಳಿಯುತ್ತಾರೆ. ಸಮಾಜದಲ್ಲಿ ಅಸಡ್ಡೆಗೆ ಒಳಗಾಗುತ್ತಾರೆ. ಇಂತಹ ಚಿಣ್ಣರ ಬದುಕಿಗೆ, ಭವಿಷ್ಯಕ್ಕೆ ಬೆಳಕಾಗುವ ನಿಟ್ಟಿನಲ್ಲಿ ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜು ಆಸ್ಪತ್ರೆಯ ಸಾರ್ಥಕ, ಮಾನವೀಯ ಸಮಾಜಸೇವೆ, ಜನಹಿತಕ್ಕೆ ಹಿಡಿದ ಕನ್ನಡಿಯಾಗಿದೆ.

ಶ್ರೀದೇವಿ ಆಸ್ಪತ್ರೆಯ ನೇತ್ರವಿಭಾಗವು ತುಮಕೂರು ಜಿಲ್ಲೆಯಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿರುವ ಶಾಲೆಗಳಿಗೆ ತೆರಳಿ ಪ್ರತಿವರ್ಷ ಉಚಿತ ನೇತ್ರ ಚಿಕಿತ್ಸಾ ಅಭಿಯಾನ ನಡೆಸಿ ಮಕ್ಕಳ ಕಣ್ಣಿನ ಸಮಸ್ಯೆ ಪತ್ತೆಹಚ್ಚಿ ಉಚಿತವಾಗಿ ಶಸ್ತ್ರಚಿಕಿತ್ಸೆ ನಡೆಸಿ ಇಂಪೋರ್ಟೆಡ್ ಲೆನ್ಸ್ ಅಳವಡಿಸುತ್ತಿದೆ. ಇಂತಹ ಗುಣಮಟ್ಟದ ಚಿಕಿತ್ಸೆಗಳಿಗೆ ಕಾರ್ಪೋರೇಟ್ ಆಸ್ಪತ್ರೆಗಳಲ್ಲಿ ಏನಿಲ್ಲವೆಂದರೂ ಕನಿಷ್ಠ ಎರಡು ಲಕ್ಷ ರೂಪಾಯಿ ವೆಚ್ಚ ಮಾಡಬೇಕಾಗುತ್ತದೆ. ಆದರೆ, ಶ್ರೀದೇವಿ ಆಸ್ಪತ್ರೆ ಇದನ್ನು ಉಚಿತವಾಗಿ ಮಾಡುತ್ತಿದೆ.

▶▶ 4ನೇ ಪುಟಕ್ಕೆ...

## ಸಾಮೂಹಿಕ ದುಡಿಮೆಯ ಫಲ

ಒಮ್ಮೆ ಬೆಂಗಳೂರಿನ ನಯೋನಿಕಾ ಐ ಕೇರ್ ಚಾರಿಟಬಲ್ ಸಂಸ್ಥೆಯ ಸಂಸ್ಥಾಪಕರಾದ ಪ್ರಶಾಂತ್ ಎಸ್. ಬಿ. ಮತ್ತು ಅವರ ಮಡದಿ ನೇತ್ರತಜ್ಞೆ ಡಾ. ಸುರೇಖಾ ಪ್ರಶಾಂತ್ ಅವರು ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜಿಗೆ ಭೇಟಿ ಕೊಟ್ಟಾಗ ಕಣ್ಣಿನಪೊರೆ ಶಸ್ತ್ರಚಿಕಿತ್ಸೆಯ ಕ್ಷೇತ್ರದಲ್ಲಿ ಮಾಡುತ್ತಿರುವ ಅಸಾಧಾರಣ ಸೇವೆಯನ್ನು ಕಂಡು ನಿಬ್ಬೆರಗಾದರು. ಶ್ರೀದೇವಿ ವೈದ್ಯಕೀಯ ಕಾಲೇಜಿನ ನೇತ್ರವಿಭಾಗ ಗ್ರಾಮೀಣ ಪ್ರದೇಶದಲ್ಲಿ ಅದರಲ್ಲೂ ತುಮಕೂರು ಮತ್ತು ಆಂಧ್ರಪ್ರದೇಶದ ಅತ್ಯಂತ ಹಿಂದುಳಿದ ತಾಲೂಕುಗಳಾದ ಪಾವಗಡ, ಮಡಕಶಿರಾ, ಶಿರಾ ಮತ್ತು ಕೊರಟಗೆರೆ ಭಾಗದ ಮಕ್ಕಳಲ್ಲಿ ಕಾಣುವ ಕಣ್ಣಿನಪೊರೆ ದೋಷವನ್ನು ಅವರಿದ್ದ ಸ್ಥಳದಲ್ಲೇ ಗುರುತಿಸಿ, ಅವರ ಭವಿಷ್ಯ ಅಂಧಕಾರವಾಗಬಾರದು ಎನ್ನುವ ಮಹತ್ವದ ಉದ್ದೇಶದಿಂದ ಅವರನ್ನು ಉಚಿತ ಕ್ಯಾಟರಾಕ್ಟ್ ಶಸ್ತ್ರಚಿಕಿತ್ಸೆಗೆ ಒಳಪಡಿಸುತ್ತಿದೆ.

ಶ್ರೀದೇವಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರವು ಮಧುಗಿರಿ ತಾಲ್ಲೂಕಿನ ಕೊಡಗೇನಹಳ್ಳಿ, ಬ್ಯಾಲ್ಯ, ಗೊಂದಿಹಳ್ಳಿ, ಬಡವನಹಳ್ಳಿ ಮೊದಲಾದ ಕಡೆ ಇರುವ ಪ್ರಾಥಮಿಕ ಆರೋಗ್ಯ ಘಟಕವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಅಲ್ಲಿಯೇ ಮಕ್ಕಳ ಕಣ್ಣಿನ ಪರೀಕ್ಷೆ ಮಾಡಿ ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜಿಗೆ ಕರೆದುಕೊಂಡು ಬಂದು ಅಲ್ಲಿ ಶಸ್ತ್ರಚಿಕಿತ್ಸೆ ನಡೆಸಿ ಅವರನ್ನು ಪುನಃ ಅವರ ಸ್ಥಳಕ್ಕೆ ತಲುಪಿಸುತ್ತಾರೆ.

ಕಣ್ಣಿನ ಶಸ್ತ್ರಚಿಕಿತ್ಸೆಯಲ್ಲಿ ರಾಷ್ಟ್ರೀಯ ಮಹತ್ವ ಪಡೆದಿರುವ ತಮಿಳುನಾಡಿನ ಅರವಿಂದ ಆಸ್ಪತ್ರೆಯಲ್ಲಿ ವಿಶೇಷವಾದ ತರಬೇತಿ ಪಡೆದು ಬಂದಿರುವ ಡಾ. ಪ್ರವೀಣ್‌ಕುಮಾರ್ ಅವರು ಈ ಶಸ್ತ್ರಚಿಕಿತ್ಸೆಯ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಜೊತೆಗೆ ಹಿರಿಯ ಶಸ್ತ್ರಚಿಕಿತ್ಸಕರಾದ ಡಾ. ಕೆ.ಪಿ. ಕಲ್ಲೇಶ್ ಅವರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ.

ಈ ಶಸ್ತ್ರಚಿಕಿತ್ಸೆಗಳನ್ನು ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿರುವ ಅತ್ಯುತ್ತಮ ಆಪರೇಷನ್



ಪಾವಗಡ ರಾಮಕೃಷ್ಣ ಆಶ್ರಮದ ಜಪಾನಂದ ಸ್ವಾಮೀಜಿ, ಡಾ.ಎಂ.ಆರ್.ಹುಲಿನಾಯ್ಕರ್, ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕರಾದ ಸುಜಾತಾ ರಾಥೋಡ್, ಡಾ.ಲಾವಣ್ಯ ರಮಣ್, ಪ್ರಶಾಂತ್, ಡಾ.ರಮಣ್ ಹುಲಿನಾಯ್ಕರ್, ಎಂ.ಎಸ್.ಪಾಟೀಲ್ ಮತ್ತು ಡಾ. ಹರೇಂದ್ರಕುಮಾರ್.

ಥಿಯೇಟರಿನಲ್ಲಿ ನಡೆಸಲಾಗುತ್ತದೆ. ಮಕ್ಕಳ ಕಣ್ಣಿನ ಶಸ್ತ್ರಚಿಕಿತ್ಸೆಯ ಸಂದರ್ಭದಲ್ಲಿ ಅನಸ್ತೇಷಿಯಾ ಕೊಡುವ ತಜ್ಞ ವೈದ್ಯರ ಪಾತ್ರ ಅತ್ಯಂತ ಪ್ರಮುಖವಾಗಿರುತ್ತದೆ. ಶಸ್ತ್ರಚಿಕಿತ್ಸೆಗೆ ಪೂರ್ವದಲ್ಲಿ ಮಕ್ಕಳ ಸಾಮಾನ್ಯ ಆರೋಗ್ಯ ತಪಾಸಣೆ, ರಕ್ತಪರೀಕ್ಷೆ ಮತ್ತು ಮತ್ತಿತರ ಪರೀಕ್ಷೆ ಮಾಡಿ ಅವರನ್ನು ಶಸ್ತ್ರಚಿಕಿತ್ಸೆಗೆ ಅಣಿಗೊಳಿಸಲು ಮಕ್ಕಳ ರೋಗತಜ್ಞರ ಆವಶ್ಯಕತೆ ಇರುತ್ತದೆ. ಶಸ್ತ್ರಚಿಕಿತ್ಸೆಗೆ ಮೊದಲು ಮಾಡಬೇಕಾದ ಈ ಪರೀಕ್ಷೆಗಳು ಮಹತ್ತ್ವದ್ದಾಗಿರುತ್ತವೆ. ಶ್ರೀದೇವಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆ ಅತ್ಯುತ್ತಮವಾದ ಲ್ಯಾಬನ್ನು ಹೊಂದಿದೆ.

ಇಂತಹ ಮೂಲಭೂತ ಸೌಕರ್ಯಗಳಿರುವ ಶ್ರೀದೇವಿ ವೈದ್ಯಕೀಯ ಕಾಲೇಜನ್ನು ಗಮನಿಸಿದ ಪ್ರಶಾಂತ್ ಹಾಗೂ ಡಾಕ್ಟರ್ ಸುರೇಖಾ ಪ್ರಶಾಂತ್ ಅವರು "ಮಕ್ಕಳ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗೆ ನಯೋನಿಕ ಐ ಕೇರ್ ಚಾರಿಟಬಲ್ ಸಂಸ್ಥೆ ಸಹಭಾಗಿತ್ವ ವಹಿಸುತ್ತದೆ" ಎಂದು ಆಶ್ವಾಸನೆ ನೀಡಿದರು. ಅದರಂತೆ ಆ ಸಂಸ್ಥೆ ಶಸ್ತ್ರಚಿಕಿತ್ಸೆಯ ನಂತರ ಅಳವಡಿಸುವ ಉತ್ತಮ ಗುಣಮಟ್ಟದ ವಿದೇಶಿ ಅಲ್ಕಾನಸ್ ಲೆನ್ಸ್ ಮತ್ತು ಕನ್ನಡಕವನ್ನು ನೀಡುತ್ತಿದೆ. ಅಷ್ಟೇ ಅಲ್ಲ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಹಾಗೂ ಸುವರ್ಣಮುಖಿ ಸಂಸ್ಕೃತಿಧಾಮದ ಸಂಸ್ಥಾಪಕ ಅಧ್ಯಕ್ಷರಾದ ಆಚಾರ್ಯ ಡಾ. ನಾಗರಾಜ್

ಅವರ ಹೆಸರಿನಲ್ಲಿ ಪ್ರತಿವರ್ಷ ಒಂದು ಸಾವಿರ ಕ್ಯಾಟ್‌ರ್ಯಾಕ್ಟ್ ಆಪರೇಷನ್‌ಗೆ ತಾವು ನೆರವು ನೀಡುವುದಾಗಿ ಘೋಷಿಸಿದರು. ಇದರ ಜೊತೆಗೆ ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹ ಕ್ಯಾಟ್‌ರ್ಯಾಕ್ಟ್ ಆಪರೇಷನ್‌ಗೆ ಅನುದಾನ ನೀಡಲು ತೀರ್ಮಾನ ಮಾಡಿತು. ಮಧುಗಿರಿ ತಾಲೂಕಿನ ಪ್ರಾಥಮಿಕ ಆರೋಗ್ಯ ಘಟಕಗಳ ಮೂಲಕ ಅರ್ಹ ಪೇಶೆಂಟ್‌ಗಳನ್ನು ಆಯ್ಕೆ ಮಾಡಿಕೊಂಡು ಬಂದು ಅವರಿಗೆ ಆಪರೇಷನ್ ಮಾಡಿ ಉಚಿತವಾಗಿ ಕನ್ನಡಕವನ್ನು ನೀಡಿ ಅವರನ್ನು ಸುರಕ್ಷಿತವಾಗಿ ಅವರ ಮನೆಗಳಿಗೆ ತಲುಪಿಸಲಾಗುತ್ತಿದೆ. ಇದರಿಂದಾಗಿ ಕ್ಯಾಟ್‌ರ್ಯಾಕ್ಟ್ ಶಸ್ತ್ರಚಿಕಿತ್ಸೆ ಎಂದರೆ ತುಮಕೂರಿನ ಶ್ರೀದೇವಿ ಆಸ್ಪತ್ರೆ ಎನ್ನುವ ಮಾತು ಎಲ್ಲೆಡೆ ಕೇಳಿ ಬರುವಂತೆ ಆಗಿದೆ.

ಕ್ಯಾಟ್‌ರ್ಯಾಕ್ಟ್‌ನಿಂದ ಯಾರೂ ತಮ್ಮ ಭವಿಷ್ಯವನ್ನು ಕಳೆದುಕೊಳ್ಳಬಾರದು ಎನ್ನುವುದು ಶ್ರೀದೇವಿ ಸಂಸ್ಥೆಯ ಸಂಸ್ಥಾಪಕರ ಧ್ಯೇಯವಾಗಿದೆ. ಕ್ಯಾಟ್‌ರ್ಯಾಕ್ಟ್ ಶಸ್ತ್ರಚಿಕಿತ್ಸೆಗೆ ಮುನ್ನ ನಡೆಸುವ ವಿವಿಧ ಪರೀಕ್ಷೆ, ಸುಸಜ್ಜಿತ ಥಿಯೇಟರ್‌ನಲ್ಲಿ ಆಪರೇಷನ್, ಅದಕ್ಕೆ ಬೇಕಾದ ಔಷಧಿ, ನಂತರ ಅಳವಡಿಸುವ ಲೆನ್ಸ್, ಕನ್ನಡಕ, ಆಪರೇಷನ್ ನಂತರದ ಆರೈಕೆ ಮೊದಲಾದವುಗಳನ್ನು ಸಂಸ್ಥೆ ಉಚಿತವಾಗಿಯೇ ನೀಡುತ್ತಾ ಬರುತ್ತಿದೆ.

ಬೆಂಗಳೂರಿನ ಮಿಂಟೋ ಆಸ್ಪತ್ರೆಯ ನಿರ್ದೇಶಕರಾಗಿದ್ದ ಪ್ರಸ್ತುತ ಕರ್ನಾಟಕ ಸರ್ಕಾರದಲ್ಲಿ ವೈದ್ಯಕೀಯ ಶಿಕ್ಷಣದ ನಿರ್ದೇಶಕರಾಗಿರುವ ಡಾ. ಸುಜಾತ ರಾಥೋಡ್ ಅವರು ಒಮ್ಮೆ ಶ್ರೀದೇವಿ ವೈದ್ಯಕೀಯ ಕಾಲೇಜಿನ ಸಮಾರಂಭವೊಂದಕ್ಕೆ ಬಂದಾಗ ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ಅಚ್ಚುಕಟ್ಟಾಗಿ ನಡೆಯುತ್ತಿದ್ದ ಮಕ್ಕಳ ಕ್ಯಾಟ್‌ರ್ಯಾಕ್ಟ್ ಸರ್ಜರಿಯ ಗುಣಮಟ್ಟ ಮತ್ತು ಅವುಗಳ ಕಾರ್ಯವಿಧಾನವನ್ನು ನೋಡಿ ಭಾವುಕರಾಗಿ ಈ ಕಾರ್ಯಕ್ರಮ ಕರ್ನಾಟಕ ಸರ್ಕಾರದ ಎಲ್ಲಾ ಸರಕಾರಿ ವೈದ್ಯಕೀಯ ಕಾಲೇಜಿನಲ್ಲಿ ನಡೆಸಬೇಕೆಂದು ತೀರ್ಮಾನ ಮಾಡಿದರು. ಬೆಂಗಳೂರಿನ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಈ ಕಾರ್ಯಕ್ರಮವನ್ನು ಪ್ರಾರಂಭಿಸಿಯೇಬಿಟ್ಟರು. ಉಳಿದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲೂ ಮಕ್ಕಳಿಗೆ ಉಚಿತ ಕ್ಯಾಟ್‌ರ್ಯಾಕ್ಟ್ ಶಸ್ತ್ರಚಿಕಿತ್ಸೆ ಪ್ರಾರಂಭವಾಗಬೇಕು ಎನ್ನುವ ಆಶಯವನ್ನು ಡಾ. ಸುಜಾತ ರಾಥೋಡ್ ಅವರ ವ್ಯಕ್ತಪಡಿಸಿದ್ದಾರೆ.

ಗ್ರಾಮೀಣ ಭಾಗದ ಮಕ್ಕಳ ಭವಿಷ್ಯ ಕಣ್ಣಿನ ದೋಷದಿಂದ ಅಂಧಕಾರವಾಗಬಾರದು ಎಂದು ಯೋಚಿಸಿದವರು ಶ್ರೀದೇವಿ ವೈದ್ಯಕೀಯ ಸಂಸ್ಥೆಯ ಸಂಸ್ಥಾಪಕರಾದ ಡಾ. ಎಂ.ಆರ್. ಹುಲಿನಾಯ್ಕರ್. ಅವರ ಆಶಯಕ್ಕೆ ಪೂರಕವಾಗಿ ಸ್ಪಂದಿಸಿರುವವರು ವೈದ್ಯಕೀಯ ಕಾಲೇಜಿನ ನಿರ್ದೇಶಕರಾಗಿರುವ ಡಾ. ರಮಣ್ ಹುಲಿನಾಯ್ಕರ್.

ಶ್ರೀದೇವಿ ವೈದ್ಯಕೀಯ ಕಾಲೇಜಿನ ನೇತ್ರವಿಭಾಗದ ಮುಖ್ಯಸ್ಥರಾದ ಡಾ. ಲಾವಣ್ಯ ರಮಣ ಅವರು ಈ ಕಾರ್ಯಕ್ರಮದ ಯಶಸ್ವಿನ ರೂವಾರಿಯಾಗಿದ್ದಾರೆ. ಅವರ ತಂಡದಲ್ಲಿ ಶಸ್ತ್ರಚಿಕಿತ್ಸಕರಾದ ಡಾ. ಪ್ರವೀಣ್ ಕುಮಾರ್, ಡಾ.ಕೆ.ಪಿ. ಕಲ್ಲೇಶ್, ಎಚ್.ಎಸ್. ಕಾರ್ತಿಕ್, ಓ.ಟಿ. ನರ್ಸ್ ಶ್ರೀಮತಿ ಕೆ.ಎಸ್.ಸುಧಾ ಮತ್ತು ಮೇಘ ಸಿ.ಎಚ್. ಅವರುಗಳ ಅಮೂಲ್ಯವಾದ ಸೇವೆಯನ್ನು ಮರೆಯುವಂತಿಲ್ಲ. ಇಂತಹ ಶಸ್ತ್ರಚಿಕಿತ್ಸೆಗಳು ವೃತ್ತಿಪರರ ಸಂಘಟನೆಯ ಯಶಸ್ವಿನ ಫಲವಾಗಿದೆ.



## ಮೇಘಾಲಯದ ರಾಜ್ಯಪಾಲರ ಭೇಟಿ

ಬಿಜೆಪಿ ಮುಖಂಡರು ಹಾಗೂ ಮಾಜಿ ವಿಧಾನ ಪರಿಷತ್ ಸದಸ್ಯರಾದ ಡಾ. ಎಂ.ಆರ್. ಹುಲಿನಾಯ್ಕರ್ ಅವರ ನಿವಾಸಕ್ಕೆ ಮೇಘಾಲಯ ರಾಜ್ಯಪಾಲರಾದ ಸಿ.ಹೆಚ್. ವಿಜಯಶಂಕರ್ ಅವರು ತಮ್ಮ ಕುಟುಂಬವರ್ಗದೊಡನೆ ಭೇಟಿ ನೀಡಿದ್ದರು. ಆ ಸಂದರ್ಭದಲ್ಲಿ ಶ್ರೀಮತಿ. ಶಾಂತಾದುರ್ಗಾದೇವಿ ಹುಲಿನಾಯ್ಕರ್, ಡಾ. ರಮಣ್ ಎಂ ಹುಲಿನಾಯ್ಕರ್, ಎಂ.ಎಸ್. ಪಾಟೀಲ್, ಶ್ರೀಮತಿ ಅಂಬಿಕಾ ಹುಲಿನಾಯ್ಕರ್, ಡಾ. ಲಾವಣ್ಯ ರಮಣ್ ಎಸ್. ನಾಗಣ್ಣ, ಮಧುಕರ್, ಶಾಸಕರಾದ ಜ್ಯೋತಿಗಣೇಶ್, ಡಾ. ಹರೇಂದ್ರ ಕುಮಾರ್, ಡಾ. ನರೇಂದ್ರ ವಿಶ್ವನಾಥ್, ಬ್ರಹ್ಮದೇವಯ್ಯ ಮೊದಲಾದವರು ಉಪಸ್ಥಿತರಿದ್ದರು.

## ಧರ್ಮಾಧಿಕಾರಿಗಳ ಆಶೀರ್ವಾದ ಪಡೆದ ಶ್ರೀಮತಿ ಅಂಬಿಕಾ ಹುಲಿನಾಯ್ಕರ್



ಧರ್ಮಸ್ಥಳದಲ್ಲಿ ಸೆಪ್ಟೆಂಬರ್ 1ರಂದು ಬಿಜೆಪಿ ಹಮ್ಮಿಕೊಂಡಿದ್ದ ಧರ್ಮಜಾಗೃತಿ ಸಮಾವೇಶ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅಂಬಿಕಾ ಹುಲಿನಾಯ್ಕರ್ ಅವರು, ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಅವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು. ಶ್ರೀಕ್ಷೇತ್ರದ ವಿರುದ್ಧ ನಡೆಯುತ್ತಿರುವ ಪಿತೂರಿ, ಅಪಪ್ರಚಾರಕ್ಕೆ ಸಂಪೂರ್ಣ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿ, ಮಹಾದ್ವಾರದಿಂದ ಕಾಲೇಜಿನವರೆಗೆ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಬೃಹತ್ ಧಾರ್ಮಿಕ ಪ್ರತಿಭಟನಾ ಮೆರವಣಿಗೆ ನಡೆಯಿತು. ಅನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ಬಿಜೆಪಿ ಪಕ್ಷದ ಎಲ್ಲಾ ಪ್ರಮುಖ ನಾಯಕರು ಭಾಗಿಯಾಗಿ ಈ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ದಳ ಅಥವಾ ಸಿಬಿಐಗೆ ಒಪ್ಪಿಸಬೇಕು ಎಂದು ಒಕ್ಕೊರಲಿನಿಂದ ಒತ್ತಾಯಿಸಿದರು.

# ಶ್ರೀದೇವಿ ಆಸ್ಪತ್ರೆಯ ವತಿಯಿಂದ ರಾಷ್ಟ್ರೀಯ ನೇತ್ರದಾನ ಜಾಗೃತಿ ಜಾಥಾ

"ಪ್ರತಿಯೊಬ್ಬರೂ ಸಾವಿನ ಅನಂತರ ತಮ್ಮ ಕಣ್ಣುಗಳನ್ನು ದಾನ ಮಾಡುವ ನಿರ್ಧಾರ ಕೈಗೊಳ್ಳಬೇಕು. ಈ ವಿಚಾರದಲ್ಲಿ ಮಾಧ್ಯಮಗಳು ಜಾಗೃತಿ ಕಾರ್ಯಕ್ರಮಗಳಿಗೆ ಪ್ರಚಾರ ಕೊಡಬೇಕು. ಶಾಲಾ–ಕಾಲೇಜುಗಳಿಗೆ ಈ ಸಂದೇಶ ತಲುಪುವ ಅಗತ್ಯವಿದೆ. ನಟಸೌರ್ವಭೌಮ ಡಾ.ರಾಜಕುಮಾರ್ ಮತ್ತು ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ತಮ್ಮ ನೇತ್ರಗಳನ್ನು ದಾನಮಾಡಿ ಕನ್ನಡನಾಡಿಗೆ ಪ್ರೇರಣೆ ನೀಡಿದ್ದಾರೆ. ದೃಷ್ಟಿ ಕಳೆದುಕೊಂಡವರು ಸಂಕಷ್ಟಗಳನ್ನು ನೋಡಿದಾಗ ನಮಗೆ ಕಣ್ಣಿನ ಬೆಲೆ ತಿಳಿಯುತ್ತದೆ. ಅದಕ್ಕಾಗಿಯೇ 'ನೇತ್ರದಾನ ಮಹಾದಾನ' ಎಂಬ ನುಡಿಗಟ್ಟು ರೂಪಗೊಂಡಿದ್ದು. ನೇತ್ರದಾನದ ಮೂಲಕ ಡಾ.ರಾಜ್‌ಕುಮಾರ್ ಇಂದಿಗೂ ನಮಗೆ ಮಾರ್ಗದರ್ಶಕರಾಗಿದ್ದಾರೆ" ಎಂದು ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ. ರಮಣ್ ಎಂ. ಹುಲಿನಾಯ್ಕರ್ ತಿಳಿಸಿದರು.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ನೇತ್ರ ಚಿಕಿತ್ಸಾ ವಿಭಾಗದ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತುಮಕೂರು ನೇತ್ರತಜ್ಞರ ಸಂಘ ಇವರುಗಳ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ನೇತ್ರದಾನ ಪಕ್ಷದ ಬಗ್ಗೆ ಜಾಗೃತಿಯ ಜಾಥಾವನ್ನು ಸೆಪ್ಟೆಂಬರ್ 4ರಂದು ಜಾಥಾವನ್ನು ಹಮ್ಮಿಕೊಳ್ಳಲಾಗಿತ್ತು.

ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ. ಅಸ್ಫರ್‌ಬೇಗ್ ಅವರು "ಮನುಷ್ಯನು ಸತ್ತ ಅನಂತರ ದೇಹವನ್ನು ಸುಡುತ್ತಾರೆ ಅಥವಾ ಹೂಳುತ್ತಾರೆ.




ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ. ರಮಣ್ ಎಂ ಹುಲಿನಾಯ್ಕರ್, ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ. ಅಸ್ಫರ್ ಬೇಗ್, ಡಾ. ಲಾವಣ್ಯ, ಡಾ. ಎಂ. ಸಂಜಯ್, ಡಾ. ದಿನೇಶ್ ಕುಮಾರ್, ಡಾ. ಪ್ರವೀಣ್‌ಕುಮಾರ್, ಡಾ.ಹರೇಂದ್ರಕುಮಾರ್, ಡಾ. ಮೋಹನ್ ಕುಮಾರ್, ಡಾ. ಪ್ರದೀಪ್‌ಕುಮಾರ್ ವೆಗ್ಗಿ, ಮತ್ತು ಡಾ.ಕಲ್ಲೇಶ್.

ಆಗ ಅವನ ಕಣ್ಣುಗಳು ಸಹ ನಾಶವಾಗುತ್ತದೆ. ಆದರೆ ಕಣ್ಣುಗಳನ್ನು ದಾನ ಮಾಡಿದರೆ ಕಣ್ಣಿನ ದೋಷದಿಂದ ಬಳಲುತ್ತಿರುವ ಅನೇಕ ಜನರಿಗೆ ಹೊಸ ಬದುಕು ದೊರಕುತ್ತದೆ. ಕತ್ತಲ್ಲಿನಲ್ಲಿ ಬದುಕುತ್ತಿದ್ದವರಿಗೆ ಬೆಳಕನ್ನು ನೀಡುವುದಕ್ಕಿಂತ ದೊಡ್ಡಸೇವೆ ಬೇರೆ ಯಾವುದೂ ಇಲ್ಲ. ಎಲ್ಲಾದರಲ್ಲೂ ಶ್ರೇಷ್ಠದಾನ ಕಣ್ಣಿನ ದಾನ. ಅದು ಕೇವಲ ದೇಹದ ಭಾಗದ ದಾನವಲ್ಲ. ಅದು ಮತ್ತೊಬ್ಬರ ಬದುಕಿನಲ್ಲಿ ದೀಪ ಹಚ್ಚುವ ಮಹತ್ತ್ವದ ಕೆಲಸ" ಎಂದರು.

ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಟ್ರಸ್ಟಿ ಹಾಗೂ ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ.ಲಾವಣ್ಯ ಅವರು "ನಟ ಪುನೀತ್ ರಾಜಕುಮಾರ್ ಮಾದರಿಯಂತೆ ನಾವು ಕೂಡ ನೇತ್ರದಾನ ಮಾಡೋಣ. ನಮ್ಮ ದೇಶದಲ್ಲಿ ಕಣ್ಣಿನ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಅಂಕಿ–ಅಂಶಗಳನ್ನು ನೋಡುವುದಾದರೆ ಸುಮಾರು 20ರಿಂದ 30 ಸಾವಿರಕ್ಕೂ ಹೆಚ್ಚು ಕೇಸ್‌ಗಳು ಎದುರಾಗುತ್ತಿದೆ, ಕಾರ್ನಿಯಾ ಅಂಧತ್ವದಿಂದ ಬಳಲುತ್ತಿರುವ ಸಂಖ್ಯೆ ನಿರಂತರವಾಗಿ ಏರುತ್ತಿದೆ" ಎಂದರು.

ನೇತ್ರತಜ್ಞರ ಸಂಘ ಅಧ್ಯಕ್ಷರಾದ ಡಾ. ಎಂ. ಸಂಜಯ್ ಅವರು "ಅಂಧತ್ವದಿಂದ ನಮ್ಮ ದೇಶದಲ್ಲಿ ಲಕ್ಷಾಂತರ ಜನರು ದೃಷ್ಟಿ ಕಳೆದುಕೊಂಡಿದ್ದಾರೆ. ಅವರ ಜೀವನ ಎಷ್ಟು ಕಷ್ಟಕರವಾಗಿದೆ ಎನ್ನುವುದನ್ನು ನಮಗೆ ಊಹಿಸಲು ಕೂಡ ಸಾಧ್ಯವಿಲ್ಲ, ನಾವು ಸತ್ತ ಅನಂತರ ನಮ್ಮ ದೇಹ ನಾಶವಾಗುತ್ತದೆ, ಆದರೆ ಕಣ್ಣುಗಳನ್ನು ದಾನ ಮಾಡಿದರೆ, ಇಂದಿನ ತಂತ್ರಜ್ಞಾನದಿಂದ ಒಂದು ಕಣ್ಣು ಐದು ಜನರಿಗೆ ಬೆಳಕು ನೀಡುತ್ತದೆ. ಬದುಕಿದ್ದಾಗಲೂ ನಾವು ಏನಾದರೂ ಕೊಡುವುದಕ್ಕೆ ಹಿಂಜರಿಯುತ್ತೇವೆ. ಆದರೆ ನಮ್ಮ ಮರಣಾನಂತರ ಹತ್ತು ಜನರಿಗೆ ದೃಷ್ಟಿ ಕೊಡುವಂತಹ ಸಾರ್ಥಕ ಕೆಲಸವನ್ನು ಮಾಡಬಹುದು" ಎಂದರು.

ತುಮಕೂರು ನೇತ್ರತಜ್ಞ ಸಂಘದ ಕಾರ್ಯದರ್ಶಿ ಡಾ. ದಿನೇಶ್‌ಕುಮಾರ್ ಅವರು 'ಕರುಣಾಳು ಬಾ ಬೆಳಕೆ' ಎಂಬ ಘೋಷವಾಕ್ಯದ ಪ್ರಕಾರ ಮರಣಾನಂತರ ನಮ್ಮ ಕಣ್ಣುಗಳನ್ನು ದಾನ ಮಾಡಿದರೆ ಅದು ಇನ್ನೊಬ್ಬರ ಬದುಕಿಗೆ ಬೆಳಕು ನೀಡುತ್ತದೆ" ಎಂದರು.

ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ. ಪ್ರವೀಣ್‌ಕುಮಾರ್‌ಅವರು "ನಾವು ಸಾಮಾನ್ಯವಾಗಿ ಹೃದಯ ಕಿಡ್ನಿ ಲಿವರ್ ಮುಂತಾದ ಅಂಗಾಂಗ ದಾನದ ಬಗ್ಗೆ ಕೇಳುತ್ತೇವೆ. ಆದರೆ ಕಣ್ಣಿನ ದಾನ ಕೂಡ ಅಷ್ಟೇ ಮಹತ್ತ್ವದ್ದು. ಮೂರು ವರ್ಷದೊಳಗಿನ ಶಿಶುಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ವರ್ಗದವರು ತಮ್ಮ ಕಣ್ಣುಗಳನ್ನು ದಾನ ಮಾಡಬಹುದು, ಮರಣವಾದ ತಕ್ಷಣವೇ 4 ರಿಂದ 6 ಗಂಟೆಗಳೊಳಗೆ ಕಣ್ಣುಗಳನ್ನು ತೆಗೆದು ಸಂರಕ್ಷಿಸಬೇಕು. ಇಲ್ಲವಾದರೆ ಉಪಯೋಗಕ್ಕೆ ಬರುವುದಿಲ್ಲ. ಹಿಂದಿನ ದಿನಗಳಲ್ಲಿ ಒಂದು ಕಣ್ಣು ಕೇವಲ ಒಬ್ಬರಿಗೆ ಮಾತ್ರ ಉಪಯೋಗವಾಗುತ್ತಿತ್ತು. ಆದರೆ ಈಗ ವೈದ್ಯಕೀಯ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿಯಾಗಿರುವುದರಿಂದ ಒಂದು ಕಣ್ಣಿನಿಂದ ಮೂರು ಜನರಿಗೆ ದೃಷ್ಟಿ ನೀಡಬಹುದು" ಎಂದರು.

# ಶಾಲಾಮಕ್ಕಳ ಕಣ್ಣಿನಪೊರೆ ಸಮಸ್ಯೆ ನಿವಾರಣೆಯಲ್ಲಿ ಶ್ರೀದೇವಿ ಆಸ್ಪತ್ರೆಯ ಸಾರ್ಥಕ, ಮಾನವೀಯ ಸೇವೆ

▶▶ 3ನೇ ಪುಟದಿಂದ

ಮಕ್ಕಳಲ್ಲಿ ಕಂಡು ಬರುವ ಕಣ್ಣಿನಪೊರೆ ಮತ್ತಿತರ ಸಮಸ್ಯೆಗಳನ್ನು ಪತ್ತೆಹಚ್ಚಿ, ಗುಣಮಟ್ಟದ ಚಿಕಿತ್ಸೆ ನೀಡಲಾಗುತ್ತಿದೆ ಎಂಬುದನ್ನು ಆಸ್ಪತ್ರೆಯ ನೇತ್ರ ಚಿಕಿತ್ಸಾ ವಿಭಾಗದ ಹಿರಿಯ ಶಸ್ತ್ರಚಿಕಿತ್ಸಕರಾದ ಡಾ. ಜಿ.ಎಸ್.ಪ್ರವೀಣ್‌ಕುಮಾರ್ ಸಂದರ್ಶನದಲ್ಲಿ ವಿವರಿಸಿದ್ದಾರೆ.

ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜು ಅಸ್ಪತ್ರೆ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿರ್ವಹಿಸುತ್ತಿದೆ. ಸಾವಿರಕ್ಕೂ ಹೆಚ್ಚು ಹಾಸಿಗೆ ಸಾಮರ್ಥ್ಯದ ಸೂಪರ್ ಸ್ಪೆಷಾಲಿಟಿ ಅಸ್ಪತ್ರೆಯಾಗಿದೆ. ವಿಶೇಷಾಗಿ ತುಮಕೂರು ಜಿಲ್ಲೆಯ ಮಧುಗಿರಿ, ಪಾವಗಡ, ಶಿರಾ ತುಮಕೂರು ತಾಲ್ಲೂಕುಗಳಲ್ಲಿ ಪ್ರತಿವರ್ಷ ಮಕ್ಕಳ ಕಣ್ಣಿನ ದೋಷ ಮತ್ತು ಅಂಧತ್ವ ನಿವಾರಣೆಗಾಗಿ ಎಲ್ಲಾ ಶಾಲೆಗಳಲ್ಲಿ ನೇತ್ರ ಚಿಕಿತ್ಸಾ ಶಿಬಿರ ಅಯೋಜಿಸಲಾಗುತ್ತಿದೆ.

ಕಣ್ಣಿನಪೊರೆ ಎಂಬುದು ಅರವತ್ತು ವರ್ಷ ದಾಟಿದ ಹಿರಿಯ ನಾಗರಿಕರಲ್ಲಿ ಸಾಮಾನ್ಯವಾಗಿ ಕಂಡುಬರುವ ಸಹಜ ವಯೋಧರ್ಮದ ಕಾಯಿಲೆ. ಕೂದಲು ಬೆಳ್ಳಗಾಗುವುದು ಮೊಣಕಾಲು ನೋವು, ಹಲ್ಲುಗಳು ಬಿದ್ದು ಹೋಗುವುದು ಮೂಳೆ ಮತ್ತು ಮೊಣಕಾಲು ಚಿಪ್ಪು ಸವೆತಗಳಂತೆ ಇದೂ ಕೂಡ ವಯೋಧರ್ಮದ ಒಂದು ಸಮಸ್ಯೆ.

ಸಾಮಾನ್ಯವಾಗಿ ಕಣ್ಣಿನಪೊರೆ ಪ್ರತಿಯೊಬ್ಬ ಮನುಷ್ಯನಿಗೂ ಬರುವುದು ಸಹಜ. ಇದರಲ್ಲಿ ಗಂಡು–ಹೆಣ್ಣು ಎಂಬ ಭೇದಭಾವ ಇರುವುದಿಲ್ಲ. ಬಿಪಿ, ಶುಗರ್ ಅಥವಾ ಮಾತ್ರೆಗಳ ಅಡ್ಡಪರಿಣಾಮ ಇರುವಂತಹವವರಿಗೆ ಕಣ್ಣಿನಪೊರೆ ಸಮಸ್ಯೆ ನಿಗದಿತ ಅವಧಿಗೂ ಮುನ್ನವೇ ಕಾಣಿಸಿಕೊಳ್ಳಬಹುದು.

ಆದರೆ, 8–10 ವರ್ಷದ ಮಕ್ಕಳಲ್ಲಿ ಕಣ್ಣಿನಪೊರೆ ಸಾಧಾರಣವಾಗಿ ಬರುವುದಿಲ್ಲ. ಒಂದು ವೇಳೆ ಬಂದಿದ್ದರೆ ಅದಕ್ಕೆ ಸೂಕ್ತಕಾರಣ ಹುಡುಕಬೇಕು.

ಇದಕ್ಕೆ ಮುಖ್ಯ ಕಾರಣ ಎಂದರೆ ಯಾವುದಾದರೂ ಏಟು ಬಿದ್ದಿರಬಹುದು ಅಥವಾ ತಾಯಿಯ ಗರ್ಭದಲ್ಲಿದ್ದಾಗಲೇ ಸೋಂಕು ತಗಲಿರಬಹುದು, ಗರ್ಭಿಣಿಯಾಗಿದ್ದಾಗ ಕೆಲವು ಕಾಯಿಲೆಗಳಿಂದ ತೊಂದರೆ ಆಗಿರಬಹುದು, ಅಲ್ಲದೆ ಸ್ಟೀರಾಯ್ಡ್, ಔಷಧಿ, ಮಾತ್ರೆಗಳ ಅಡ್ಡ ಪರಿಣಾಮ ಸಹ ಇದಕ್ಕೆ ಕಾರಣವಾಗಿರಬಹುದು.



ಎಳೆಯ ವಯಸ್ಸಿನ ಮಕ್ಕಳಿಗೆ ಪೊರೆ ಬಂದರೆ ಬಹಳ ಸಮಸ್ಯೆಯಾಗುತ್ತದೆ ಅವರ ಜೀವನವೇ ಕತ್ತಲೆಯ ಕೂಪವಾಗಲಿದೆ. ಮಕ್ಕಳು ಓದುವುದು, ಸಹಜ ಆಟೋಟ ನಿಲ್ಲಿಸುತ್ತಾರೆ. ಸಾಮಾಜಿಕ ಸಂಪರ್ಕ ಮತ್ತು ಗೆಳೆತನ ಇಲ್ಲವಾಗುತ್ತದೆ.

ತಾಯಿಯ ಮುಖ ನೋಡಿ ನಗುವುದು, ಸಹಜ ಅಭಿವ್ಯಕ್ತಿ, ಭಾವನೆಗಳನ್ನು ಮಗು ಕಳೆದುಕೊಳ್ಳಲಿದೆ. ಸುಮ್ಮನೆ ಊಟ ಮಾಡಿ ಒಂದು ಕಡೆ ಕುಳಿತುಕೊಂಡಿರುತ್ತದೆ. ಇಂತಹ ಮಕ್ಕಳಿಗೆ ಆದಷ್ಟು ಶೀಘ್ರ ಆಪರೇಷನ್ ಮಾಡಿ ಸಮಸ್ಯೆ ಪರಿಹರಿಸಬೇಕಾಗುತ್ತದೆ.

ಇಲ್ಲದೆ ಹೋದರೆ ಮಗುವಿನ ಸಮಗ್ರ ಬೆಳವಣಿಗೆಗೆ ಬಹಳ ತೊಂದರೆಯಾಗಲಿದೆ. ಶ್ರೀದೇವಿ ವೈದ್ಯಕೀಯ ಕಾಲೇಜು ಆಸ್ಪತ್ರೆ ಜಿಲ್ಲೆಯಲ್ಲಿ ಇಂತಹ ಮಕ್ಕಳನ್ನು ಗುರುತಿಸಿ ಅವರಿಗೆ ಉಚಿತ ಆಪರೇಷನ್ ಮಾಡುವ ಮೂಲಕ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿರ್ವಹಿಸುತ್ತಿದೆ. ಮಕ್ಕಳಿಗೆ ಕಣ್ಣಿನ ಪೊರೆ ಸಮಸ್ಯೆ ಬರಬಾರದು. ಒಂದೊಮ್ಮೆ ಯಾವುದೇ ಕಾರಣದಿಂದ ಬಂದಿದ್ದರೂ, ಸೂಕ್ತ ಚಿಕಿತ್ಸೆ ಲಭಿಸದೆ ಅವರ ಬದುಕು ಕತ್ತಲಲ್ಲಿ ಕಳೆದು ಹೋಗಬಾರದು ಎಂಬ ಕಾರಣದಿಂದ ಶ್ರೀದೇವಿ ಆಸ್ಪತ್ರೆ ಇಂತಹ ಮಕ್ಕಳಿಗೆ ಉಚಿತವಾಗಿ ಆಪರೇಷನ್ ಮಾಡುತ್ತಿದೆ. ಇದಕ್ಕಾಗಿ ಶಾಲೆಗಳಿಗೆ ಭೇಟಿ ನೀಡಿ ಉಚಿತ ನೇತ್ರ ತಪಾಸಣೆ ನಡೆಸಲಾಗುತ್ತಿದೆ. ಸಣ್ಣಪುಟ್ಟ ಸಮಸ್ಯೆ ಇದ್ದವರಿಗೆ ಕನ್ನಡಕ ನೀಡಲಾಗುವುದು ಅದನ್ನು ಮೀರಿದವರಿಗೆ ಆಪರೇಷನ್ ಮಾಡಲಾಗುವುದು, ಕನ್ನಡಕದಿಂದ ಕಣ್ಣಿನ ಸಮಸ್ಯೆ ಬಗೆಹರಿಯದಿದ್ದರೆ, ಅಂತಹವರನ್ನು ತುಮಕೂರಿನ ಶ್ರೀದೇವಿ ಆಸ್ಪತ್ರೆಗೆ ಕರೆತಂದು ಉಚಿತವಾಗಿ ಆಪರೇಷನ್ ನಡೆಸಲಾಗುತ್ತಿದೆ. ಸದ್ಯಕ್ಕೆ ಮಧುಗಿರಿ, ಪಾವಗಡ, ತುಮಕೂರು ಹಾಗೂ ಶಿರಾ ತಾಲೂಕಿನ ಮಕ್ಕಳಿಗೆ ಕಳೆದ ಒಂದು ವರ್ಷದಲ್ಲಿ ಹನ್ನೆರಡಕ್ಕೂ ಹೆಚ್ಚು ಉಚಿತ ಶಸ್ತ್ರಚಿಕಿತ್ಸೆ ಮಾಡಲಾಯಿತು. ಅವರ ಒಂದು ಕಣ್ಣಿಗೆ ಆಪರೇಷನ್ ಮಾಡಿಸಿಕೊಂಡಿದ್ದ ಮಕ್ಕಳು ಶಾಲೆಗೆ ಹೋಗಿ ಸಹಜ ಜೀವನ ನಡೆಸುತ್ತಿದ್ದಾರೆ. ಹೀಗಾಗಿ ಅವರ ತಂದೆ ತಾಯಿಗಳು ಸಹ ಇದರಿಂದ ಸಂತುಷ್ಟರಾಗಿದ್ದಾರೆ. ಇವರಲ್ಲಿ ಶೇಕಡ 90ರಷ್ಟು ಭಾಗ ಮಕ್ಕಳು ಆರ್ಥಿಕವಾಗಿ ದುರ್ಬಲ ವರ್ಗಕ್ಕೆ ಸೇರಿದವರೇ ಆಗಿದ್ದಾರೆ. ಇಂತಹ ಮಕ್ಕಳಿಗೆ ಉಚಿತ ಆಪರೇಷನ್ನಿನಿಂದ ಬಹಳ ಸಹಾಯವಾಗುತ್ತಿದೆ, ನಮ್ಮ ಶ್ರೀದೇವಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆ ಇಂತಹ ಸಮಾಜಸೇವಾ ಕಾರ್ಯದಲ್ಲಿ ತೊಡಗಿರುವುದು ನಿಜಕ್ಕೂ ಖುಷಿಯ ವಿಚಾರ. ಮಕ್ಕಳಿಗೆ ಅವರ ಸಮಯ ನೋಡಿಕೊಂಡು ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ. ಇಂತಹ ಕೆಲಸ ಮಾಡಲು ವೈದ್ಯಕೀಯ ಕಾಲೇಜಿನ ಆಸ್ಪತ್ರೆ, ಅದರ ಆಡಳಿತ ಮಂಡಳಿ ಮತ್ತು ಸಿಬ್ಬಂದಿಯಿಂದ ದೊರಕುತ್ತಿರುವ ಸಂಪೂರ್ಣ ಸಹಕಾರ, ಒತ್ತಾಸೆ ಮುಖ್ಯ ಕಾರಣವಾಗಿದೆ ಎಂದು ಡಾ. ಪ್ರವೀಣ್ ಕುಮಾರ್ ಅವರು ವಿನೀತಭಾವದಿಂದ ಸ್ಮರಿಸುತ್ತಾರೆ.

## ಅಭಿನಂದನೆ



ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಮಾಜಕಾರ್ಯಗಳ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಹಿರಿಯ ಪ್ರಾಧ್ಯಾಪಕರು ಹಾಗೂ ಸಿಂಡಿಕೇಟ್ ಸದಸ್ಯರಾದ ಪ್ರೊ. ಕೆ.ಜಿ. ಪರಶುರಾಮ್ ಅವರನ್ನು ಕಲ್ಬುರ್ಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾನಿಲಯದ ನ್ಯಾಯಾಲಯದ ಸದಸ್ಯರಾಗಿ ನೇಮಕ ಮಾಡಲಾಗಿದೆ. ಶ್ರೀಯುತರಿಗೆ ಶುಭ ಹಾರೈಸಿದವರು – ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್, ಡಾ. ರಮಣ್ ಎಂ ಹುಲಿನಾಯ್ಕರ್, ಎಂ.ಎಸ್. ಪಾಟೀಲ್, ಶ್ರೀಮತಿ ಅಂಬಿಕಾ ಹುಲಿನಾಯ್ಕರ್, ಮತ್ತು ಪ್ರಾಂಶುಪಾಲರಾದ ಡಾ. ಎಂ.ಎಲ್. ಹರೇಂದ್ರ ಕುಮಾರ್.

# ಜಿ.ಎಸ್.ಟಿ. ಸುಧಾರಣೆಗಳು

▶▶ 2ನೇ ಪುಟದಿಂದ

"ಇದು ಜನಮುಖಿಯಾಗಿರುವ ಕ್ರಮವಾದರೂ, ಪ್ರಶಸ್ತಮಣಿಗಳು ಮತ್ತು ಆಭರಣಗಳ ಉದ್ದಿಮೆಗೆ ಈ ಸುಧಾರಣೆಯಿಂದ ಯಾವ ಉಪಯೋಗವೂ ಆಗಿಲ್ಲವೆಂಬುದು ಈ ಉದ್ದಿಮೆಗೆ ದುಃಖಕರ ಸಂಗತಿಯಾಗಿದೆ" ಎಂದು ಆಭರಣ ತಯಾರಿಕೆಯ ಒಂದು ಉದ್ದಿಮೆಯ ಮುಖ್ಯಸ್ಥರೊಬ್ಬರು ವಿಷಾದವನ್ನು ವ್ಯಕ್ತಪಡಿಸಿದ್ದಾರೆ.

ನಿರ್ಮಾಣ ಕಾರ್ಯದಲ್ಲಿ ತೊಡಗಿರುವ ಸಂಸ್ಥೆಯೊಂದರ ಮುಖ್ಯಾಧಿಕಾರಿಯ ಅಭಿಪ್ರಾಯ ಹೀಗಿದೆ: "ತೆರಿಗೆಯ ವ್ಯವಸ್ಥೆಯಲ್ಲಿ




ತರಲು ಉದ್ದೇಶಿಸಿರುವ ಈ ಬದಲಾವಣೆಗಳು ನಮ್ಮ ನಿರ್ಮಾಣ ವೆಚ್ಚವನ್ನು ತಗ್ಗಿಸುತ್ತದೆ ಮತ್ತು ಮನೆಗಳಿಗಾಗಿ ಇರುವ ಬೇಡಿಕೆ ಹೆಚ್ಚಾಗುತ್ತದೆ. ಇದರಿಂದ ನಮಗೂ ನಮ್ಮ ಗ್ರಾಹಕರಿಗೂ ಅನುಕೂಲವಾಗುತ್ತದೆ. ಇದಲ್ಲದೆ, ಗೃಹನಿರ್ಮಾಣ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕ್ಷೇತ್ರಗಳಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ".

ದೇಶದ ಪ್ರಮುಖ ಉದ್ದಿಮೆ ಹಾಗೂ ಚಿಲ್ಲರೆ ವಹಿವಾಟಿನಲ್ಲಿ ತೊಡಗಿರುವ ಸಂಸ್ಥೆಯ ಅಧ್ಯಕ್ಷರೂ, ವ್ಯವಸ್ಥಾಪಕ ನಿರ್ದೇಶಕರೂ ಆಗಿರುವವರೊಬ್ಬರ ಪ್ರಕಾರ, "GSTಯಲ್ಲಿ ಮಾಡಲು ಉದ್ದೇಶಿಸಿರುವ ಸುಧಾರಣೆಗಳು ಸರಿಯಾದ ದಿಕ್ಕಿನಲ್ಲಿ ಇಟ್ಟಿರುವ ದಿಟ್ಟ ಹಾಗೂ ಸಮಯೋಚಿತವಾದ ಹೆಜ್ಜೆಯಾಗಿದೆ. ಇದರಿಂದ ನಮ್ಮ ಸಂಸ್ಥೆಗಳಿಂದ ದೊರೆಯುತ್ತಿರುವ ಸೇವೆಗಳು ಇನ್ನು ಮುಂದೆ ಕಡಮೆ ಬೆಲೆಯಲ್ಲಿ ನಮ್ಮ ಗ್ರಾಹಕರಿಗೆ ದೊರೆಯಲಿವೆ ಮತ್ತು ನಮ್ಮ ವ್ಯವಹಾರಗಳು ಸುಗಮವಾಗಿ ನಡೆಯಲು ಇದರಿಂದ ಸಾಧ್ಯವಾಗುತ್ತದೆ. ಈ ಆರ್ಥಿಕ ವರ್ಷದ ಮೊದಲ ತ್ರೈಮಾಸದಲ್ಲಿ ದೇಶವು ಜಿಡಿಪಿಯಲ್ಲಿ ಸಾಧಿಸಿದ್ದ ಶೇ 7.8ರಷ್ಟು ಪ್ರಗತಿಯನ್ನು ಇನ್ನೂ ಮೇಲಕ್ಕೆ ಕೊಂಡೊಯ್ದು ಎರಡಂಕಿಯ ಸಾಧನೆಯನ್ನು ಮಾಡಲು ಕೂಡ ಇದು ನೆರವಾಗುತ್ತದೆ".

ಇಷ್ಟೆಲ್ಲಾ ಅನುಕೂಲಗಳಿದ್ದರೂ, ತೆರಿಗೆ ವಿನಾಯತಿ ಮತ್ತು ಕಡಮೆ ತೆರಿಗೆಗಳ ಲಾಭವು ನಿಜವಾಗಿಯೂ ಅಂತಿಮವಾಗಿ ಗ್ರಾಹಕರನ್ನು ತಲುಪುತ್ತದೆಯೇ ಎಂಬ ಸಂದೇಹ ಸಾಮಾನ್ಯ ಜನರಲ್ಲಿ ಕಂಡುಬರುತ್ತಿದೆ. ಈ ರೀತಿ ಆಗದಂತೆ ತಡೆಯುವ ಜವಾಬ್ದಾರಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳ ಮೇಲೆ ಹಾಗೂ ಕೇಂದ್ರ ಸರ್ಕಾರದ ಮೇಲೆ ಇದೆ.

**ಉಪಸಂಹಾರ:**

ಸರಳೀಕೃತವಾಗಲಿರುವ GST ವ್ಯವಸ್ಥೆ ಮತ್ತು ವ್ಯಾಪಕವಾಗಿ ಆಗಲಿರುವ ತೆರಿಗೆ ದರಗಳ ಇಳಿಕೆ – ಇವು ಭಾರತದ ತೆರಿಗೆಯ ಚರಿತ್ರೆಯಲ್ಲಿ ಒಂದು ಹೊಸ, ಹಾಗೂ ಪ್ರಮುಖ ಅಧ್ಯಾಯವಾಗಲಿದೆ. ಅಗತ್ಯ ವಸ್ತುಗಳು ನಾಗರಿಕರಿಗೆ ಕಡಮೆ ದರದಲ್ಲಿ ದೊರಕಲಿವೆ. ವ್ಯಾಪಾರ ಮತ್ತು ವಹಿವಾಟುಗಳಲ್ಲಿ ಸ್ಪರ್ಧಾತ್ಮಕತೆ ಮತ್ತು ಪಾರದರ್ಶಕತೆಗಳಿಗೆ ಈ ಹೊಸ ವ್ಯವಸ್ಥೆ ಇಂಬು ಕೊಡುತ್ತದೆ. ಉದ್ದೇಶಿತ GSTಯು ಕೇವಲ ತೆರಿಗೆ ವ್ಯವಸ್ಥೆಯನ್ನು ಸುಧಾರಿಸುವುದಷ್ಟೇ ಅಲ್ಲದೆ, ದೇಶದ ಸಮೃದ್ಧಿ ಮತ್ತು ಆರ್ಥಿಕತೆಯ ಹರಿಕಾರವೂ ಆಗುತ್ತದೆ ಮತ್ತು ವಿದೇಶೀವಸ್ತುಗಳ ಮೇಲಿನ ಅವಲಂಬನೆ ದೇಶದಲ್ಲಿ ಕಡಮೆಯಾಗುತ್ತದೆ. ಇದರಿಂದ ಜನತೆಯ ಜೀವನದ ವೆಚ್ಚ, ವ್ಯಾಪಾರ ಮತ್ತು ವಹಿವಾಟು, ವ್ಯವಹಾರವನ್ನು ನಡೆಸುವ ವೆಚ್ಚ ಕಡಮೆಯಾಗುತ್ತದೆ.

■ ನಿರೂಪಣೆ: ವಿ.ಕೃಷ್ಣ

# ಶ್ರೀದೇವಿ ಔಷಧ ವಿಜ್ಞಾನ ಕಾಲೇಜಿನಲ್ಲಿ ಶ್ರೀಸಂಸ್ಕೃತಿ ವಾರ್ಷಿಕೋತ್ಸವ–2025

"ಅತಿಯಾದ ರೋಗನಿರೋಧಕ ಔಷಧಿಗಳ ಸೇವನೆಯಿಂದ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳನ್ನು ತಡೆಯಲು ವೈದ್ಯಕೀಯ ಸಮುದಾಯ ಜಾಗೃತಿ ಮೂಡಿಸಬೇಕಾಗಿದೆ" ಎಂದು ಬೆಂಗಳೂರಿನ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ಡೀನ್ ಡಾ. ಅಶೋಕ್‌ಕುಮಾರ್ ಮಲ್ಪಾನಿರವರು ತಿಳಿಸಿದರು.

ತುಮಕೂರಿನ ಶ್ರೀದೇವಿ ಔಷಧ ವಿಜ್ಞಾನ ಮಹಾವಿದ್ಯಾಲಯ ಕಾಲೇಜಿನ ವತಿಯಿಂದ 'ಶ್ರೀಸಂಸ್ಕೃತಿ' ಕಾಲೇಜು ವಾರ್ಷಿಕೋತ್ಸವವನ್ನು ಸೆ. 03ರಂದು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಡಾ. ಅಶೋಕ್‌ಕುಮಾರ್ ಮಲ್ಪಾನಿ ಅವರು "ಶರೀರದ ವಿವಿಧ ಭಾಗಗಳು ಸರಿಯಾಗಿ ಕೆಲಸ ಮಾಡದ ಕಾರಣ ಬೇರೆ ಬೇರೆ ರೀತಿಯ ಆರೋಗ್ಯ ಸಮಸ್ಯೆಗಳು ಉಂಟಾಗುತ್ತದೆ. ಆಗ ಅನಿವಾರ್ಯವಾಗಿ ರೋಗನಿರೋಧಕ ಔಷಧಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದರ ಪರಿಣಾಮಗಳನ್ನು ರೋಗಿಗಳಿಗೆ ತಿಳಿಸಬೇಕು. ಇದರ ಬಗ್ಗೆ ಜನಜಾಗೃತಿ ಅಗತ್ಯವಾಗಿದೆ. ವೈದ್ಯರು ಮತ್ತು ಔಷಧತಜ್ಞರು ಈ ನಿಟ್ಟಿನಲ್ಲಿ ಹೆಚ್ಚಿನ ಕಾಳಜಿ ವಹಿಸಬೇಕಾಗಿದೆ. ಔಷಧ ವಿಜ್ಞಾನದ ಕೋರ್ಸ್‌ಗಳನ್ನು ಜನಪ್ರಿಯಗೊಳಿಸುವ ಉದ್ದೇಶದಿಂದ ಪದವಿ ವಿದ್ಯಾರ್ಥಿಗಳಿಗೆ ಸಂಶೋಧನಾ ಪುರಸ್ಕಾರ ನಿಧಿಯನ್ನು 15 ಸಾವಿರದಿಂದ 30 ಸಾವಿರ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಔಷಧ ವಿಜ್ಞಾನ ವಿದ್ಯಾರ್ಥಿಗಳು ಈ ಸೌಲಭ್ಯವನ್ನು ವಿದ್ಯಾಥಿಗಳು ಪಡೆದುಕೊಳ್ಳಬೇಕು" ಎಂದರು.



**ಬೆಂಗಳೂರಿನ ರಾಜೀವ್‌ಗಾಂಧಿ ಆರೋಗ್ಯ ವಿಶ್ವ ವಿದ್ಯಾನಿಲಯದ ಡೀನ್ ಡಾ. ಅಶೋಕ್ ಕುಮಾರ್ ಮಲ್ಪಾನಿ, ಬೆಂಗಳೂರಿನ ಕರ್ನಾಟಕ ರಾಜ್ಯ ಫಾರ್ಮಸಿ ಕೌನ್ಸಿಲ್‌ನ ರಿಜಿಸ್ಟರ್ ಡಾ. ಕ್ರಾಂತಿಕುಮಾರ್ ಸಿರ್ಸಿ, ಎಂ.ಎಸ್. ಪಾಟೀಲ್, ಶ್ರೀಮತಿ ಅಂಬಿಕಾ ಎಂ. ಹುಲಿನಾಯ್ಕರ್, ಶ್ರೀದೇವಿ ಔಷಧ ವಿಜ್ಞಾನ ಕಾಲೇಜಿನ ನಿರ್ದೇಶಕರಾದ ಡಾ. ಬಿ. ಗೋಪಾಲಕೃಷ್ಣ, ಶ್ರೀದೇವಿ ಔಷಧ ವಿಜ್ಞಾನ ಕಾಲೇಜಿನ ಪ್ರಾಂಶುಪಾಲರಾದ ಡಾ. ಶಿವಕುಮಾರ್, ಡಾ.ಜಿ.ಅರ್ಪಿತಾ, ಡಾ. ಕೆ.ಎಸ್. ಶ್ರೀಲತಾ, ಹೆಚ್.ಎ.ರಮೇಶ್ ಮೊದಲಾದವರು ಭಾಗವಹಿಸಿದ್ದರು.**

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬೆಂಗಳೂರಿನ ಕರ್ನಾಟಕ ರಾಜ್ಯ ಫಾರ್ಮಸಿ ಕೌನ್ಸಿಲ್‌ನ ರಿಜಿಸ್ಟರ್ ಡಾ.ಕ್ರಾಂತಿಕುಮಾರ್‌ಸಿರ್ಸಿರವರು "ರಾಜ್ಯದಲ್ಲಿ 95 ಸಾವಿರ ಔಷಧ ತಜ್ಞರು ನೋಂದಾವಣೆ ಮಾಡಿಕೊಂಡಿದ್ದಾರೆ. ನೊಂದಣಿ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಿದ್ದು, ಮೊಬೈಲ್ ಆಪ್ ಮೂಲಕವೇ ಕುಳಿತ ಜಾಗದಿಂದ ನೋಂದಣಿ ಮಾಡುವ ವಿನೂತನ ವ್ಯವಸ್ಥೆಯನ್ನು ರಾಜ್ಯದಲ್ಲಿ ಜಾರಿಗೊಳಿಸಲಾಗಿದೆ" ಎನ್ನುವ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್. ಪಾಟೀಲ್‌ರವರು "ಕೋವಿಡ್ ಸಂದರ್ಭದಲ್ಲಿ ಔಷಧ ತಜ್ಞರು ಮನೆ–ಮನೆಗೆ ತೆರಳಿ ಔಷದ ನೀಡುವ ಮೂಲಕ ವೈದ್ಯಕೀಯ ಲೋಕದಲ್ಲಿ ಅವರ ಪಾತ್ರ ಎಷ್ಟು ಮುಖ್ಯ ಎಂಬುದನ್ನು ಸಾಬೀತುಪಡಿಸಿದ್ದಾರೆ. ಇದರಿಂದಾಗಿ ದೇಶದಲ್ಲಿ ಫಾರ್ಮಸಿ ಕಾಲೇಜುಗಳ ಸಂಖ್ಯೆ ಹೆಚ್ಚಾಗುತ್ತಿದೆ. ಈ ವಲಯದಲ್ಲಿ ಉದ್ಯೋಗಾವಕಾಶಗಳ ಸಂಖ್ಯೆಯು ಹೆಚ್ಚಾಗುತ್ತಿದೆ" ಎಂದರು.

ಕಾರ್ಯಕ್ರಮದಲ್ಲಿ ಶ್ರೀದೇವಿ ಔಷಧ ವಿಜ್ಞಾನ ಕಾಲೇಜಿನ ಪ್ರಾಂಶುಪಾಲರಾದ ಡಾ. ಶಿವಕುಮಾರ್‌ರವರು ವಾರ್ಷಿಕ ವರದಿಯನ್ನು ಮಂಡಿಸಿದರು. ಇದೇ ಸಂದರ್ಭದಲ್ಲಿ ಬೆಂಗಳೂರಿನ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ಡೀನ್ ಡಾ.ಅಶೋಕ್ ಕುಮಾರ್ ಮಲ್ಪಾನಿ ಹಾಗೂ ಬೆಂಗಳೂರಿನ ಕರ್ನಾಟಕ ರಾಜ್ಯ ಫಾರ್ಮಸಿ ಕೌನ್ಸಿಲ್‌ನ ರಿಜಿಸ್ಟರ್ ಡಾ.ಕ್ರಾಂತಿಕುಮಾರ್ ಸಿರ್ಸಿ ಅವರಿಗೆ ಶ್ರೀದೇವಿ ಔಷಧ ವಿಜ್ಞಾನ ಕಾಲೇಜಿನ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

# ಸುಧಾರಿತ ತಂತ್ರಜ್ಞಾನದೊಂದಿಗೆ ಸಹಾನುಭೂತಿಯ ಚಿಕಿತ್ಸೆ ಇಂದಿನ ಅಗತ್ಯ

"ಕಳೆದ 25 ವರ್ಷಗಳಲ್ಲಿ ಪೀಡಿಯಾಟ್ರಿಕ್ ಕ್ರಿಟಿಕಲ್ ಕೇರ್ (ಪ್ರಾಣಾಪಾಯದ ಸನ್ನಿವೇಶದಲ್ಲಿರುವ ಶಿಶುಗಳಿಗೆ ನೀಡುವ ಚಿಕಿತ್ಸೆ) ಸಾಕಷ್ಟು ಬೆಳೆದು ವಿಸ್ತಾರಗೊಂಡಿದೆ. ಹಲವಾರು ಯಂತ್ರಗಳು, ಮಾನಿಟರ್‌ಗಳು, ಸಾಧನಗಳು ಅಭಿವೃದ್ಧಿಗೊಳ್ಳುತ್ತಲೇ ಇವೆ. ಹೀಗೆ, ತಾಂತ್ರಿಕತೆಯ ದೃಷ್ಟಿಯಿಂದ ಏನೇ ಬದಲಾವಣೆಗಳು ಆಗುತ್ತಿದ್ದರೂ, ಶಿಶುಗಳಿಗೆ ಚಿಕಿತ್ಸೆ ನೀಡುವಾಗ ಸಹಾನುಭೂತಿ, ಸಂಬಂಧಿಸಿದವರೊಂದಿಗೆ ಉತ್ತಮ ಸಂವಹನ ಹಾಗೂ ಇಡೀ ತಂಡದ ಸಂಘಟಿತ ಪರಿಶ್ರಮ ಮುಖ್ಯವಾಗಲಿದ್ದು, ಇದಕ್ಕೆ ಯಾವ ಪರ್ಯಾಯವೂ ಇಲ್ಲ. ಪೀಡಿಯಾಟ್ರಿಕ್ ಕ್ರಿಟಿಕಲ್ ಕೇರ್ ಎಂಬುದು ಹಿಂದೆ ಕೇವಲ ದೊಡ್ಡ ನಗರಗಳಿಗೆ ಮಾತ್ರ ಸೀಮಿತವಾಗಿತ್ತು. ಇಂದು ಎರಡನೇ ಶ್ರೇಣಿಯ ನಗರಗಳು ಹಾಗೂ ಗ್ರಾಮೀಣ ಪ್ರದೇಶಗಳಿಗೂ ಅದು ವಿಸ್ತರಣೆಗೊಳ್ಳುತ್ತಿದೆ. ವೈದ್ಯನಾದವನಿಗೆ ಅನುಭವ ಬಹಳ ಮುಖ್ಯ ಮತ್ತು ಸಕಾಲದಲ್ಲಿ ನಿರ್ಧಾರ ಕೈಗೊಳ್ಳಬೇಕು. ಭವಿಷ್ಯದಲ್ಲಿ ತಾಯಿ ಮತ್ತು ನವಜಾತ ಶಿಶು ಮರಣ ಪ್ರಮಾಣವನ್ನು ಕಡಿಮೆ ಮಾಡಲು ಮತ್ತು ಮಕ್ಕಳ ಆರೋಗ್ಯವನ್ನು ಕಾಪಾಡಲು ಈ ಸಮಾವೇಶ ಮತ್ತಷ್ಟು ಬೆಳಕು ಚೆಲ್ಲಬೇಕು" ಎಂದು ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್– ಭಾರತೀಯ ಮಕ್ಕಳ ಚಿಕಿತ್ಸಾ ಅಕಾಡೆಮಿ ಅಧ್ಯಕ್ಷ ಡಾ. ಜಿ.ವಿ. ಬಸವರಾಜ್‌ರವರು ಹೇಳಿದ್ದಾರೆ. ತುಮಕೂರಿನ ಶ್ರೀದೇವಿ ಕಾಲೇಜಿನಲ್ಲಿ ಸೆಪ್ಟೆಂಬರ್ 13ರಂದು ಜರುಗಿದ ತೀವ್ರ ನಿಗಾ ಘಟಕದಲ್ಲಿ ಮಕ್ಕಳ ಚಿಕಿತ್ಸೆಯನ್ನು ಕುರಿತ ರಾಜ್ಯಮಟ್ಟದ ಸಮ್ಮೇಳನದಲ್ಲಿ




ಶ್ರೀಯುತರು ಮಾತನಾಡುತ್ತಿದ್ದರು.

ಕಾರ್ಯಕ್ರಮದಲ್ಲಿ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಡಾ. ಎಂ. ಆರ್. ಹುಲಿನಾಯ್ಕರ್ ಮಾತನಾಡುತ್ತಾ "ಚಿಕಿತ್ಸೆಯ ವೇಳೆ ಯಶಸ್ಸು ಕಾಣಬೇಕೆಂದರೆ ಸುಧಾರಿತ ತಂತ್ರಜ್ಞಾನ, ಮಕ್ಕಳತಜ್ಞರ ಜ್ಞಾನ ಹಾಗೂ ಅನುಭವ ಎಲ್ಲವೂ ಮೇಳೈಸುವುದು ಅತ್ಯಗತ್ಯ. ಮಾತೃತ್ವದ ಭಾವನೆಯೊಂದಿಗೆ ಚಿಕಿತ್ಸೆ ನೀಡುವುದು ಹಾಗೂ ಚಿಕಿತ್ಸೆಗೆ ಸಂಬಂಧಿಸಿದಂತೆ ರೋಗಿಗಳ ಕುಟುಂಬಸ್ಥರಿಗೆ ಉತ್ತಮವಾಗಿ ವಿವರಿಸುವುದು ಎಲ್ಲಕ್ಕಿಂತ ಬಹಳ ಮುಖ್ಯವಾಗಲಿದೆ" ಎಂದರು.

ಇದೇ ಮೊದಲ ಬಾರಿಗೆ ತುಮಕೂರಿನಲ್ಲಿ ರಾಜ್ಯಮಟ್ಟದ ಮಟ್ಟದ ಮಕ್ಕಳ ತಜ್ಞರ ಸಮಾವೇಶ ನಡೆಯುತ್ತಿದ್ದು 500ಕ್ಕೂ ಹೆಚ್ಚು ಮಕ್ಕಳ ತಜ್ಞರು ಭಾಗಿಯಾಗಿದ್ದರು.

ಸಮಾವೇಶದಲ್ಲಿ ಶ್ರೀದೇವಿ ವೈದ್ಯಕೀಯ ನಿರ್ದೇಶಕ ಡಾ. ರಮಣ್ ಎಂ ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಂ.ಎಲ್. ಹರೇಂದ್ರಕುಮಾರ್, ಡಾ. ಸಂತೋಷ್, ಡಾ. ರವಿಶಂಕರ್, ಡಾ. ರಾಜೇಶ್ ಹೆಗ್ಗಡೆ, ಡಾ. ಮಧುಪೂಜಾ, ಡಾ. ಯಶಸ್ವಿನಿ, ಡಾ. ಶಿವಕುಮಾರ್, ಡಾ. ಸಿ. ಅಶೋಕ್, ಕಾರ್ಯದರ್ಶಿ ಡಾ. ಸಿ.ಕೆ. ಚಂದನ್, ಡಾ. ಕುಮಾರ್, ವೈದ್ಯಕೀಯ ಅಧೀಕ್ಷಕರಾದ ಡಾ. ಮೋಹನ್‌ಕುಮಾರ್, ಡಾ. ಅರುಣ್‌ಕುಮಾರ್, ಶ್ರೀದೇವಿ ಆಸ್ಪತ್ರೆಯ ಮಕ್ಕಳ ಚಿಕಿತ್ಸಾ ವಿಭಾಗದ ಮುಖ್ಯಸ್ಥೆಯಾಗಿರುವ ಡಾ. ಎಚ್. ಪಲ್ಲವಿ, ಡಾ. ಮೌನೇಶ್ ಪತ್ತಾರ್, ಗಾನಶ್ರೀ, ಶಿಲ್ಪಶ್ರೀ, ಖಜಾಂಚಿ ಡಾ. ಸುಮಂತ್ ಪಾಟೀಲ್, ಶ್ರೀಸಿದ್ದಗಂಗಾ ಆಸ್ಪತ್ರೆಯ ನವಜಾತ ಶಿಶುತಜ್ಞ ಡಾ. ಈಶ್ವರ್ ಮಕ್ಕಂ, ಡಾ. ಮಧುಚಂದನ್ ಮುಂತಾದವರು ಉಪಸ್ಥಿತರಿದ್ದರು.

■ ವರದಿ: ಎನ್. ಆನಂದ

# ಸಮುದಾಯ ಆರೋಗ್ಯ ಸಂರಕ್ಷಣೆಗಾಗಿ ಆರೋಗ್ಯ ಇಲಾಖೆ ಅಭಿಯಾನ

## ಸುರಕ್ಷಿತ ಆಹಾರ ಖಾತರಿಗೆ ಕ್ರಮ: ವಿಷವರ್ತುಲ ಭೇದಿಸಲು ತಪಾಸಣೆ, ಪರೀಕ್ಷೆ, ಜಾಗೃತಿ



**▪ ಬಿ.ಎಸ್. ವೆಂಕಟೇಶ ಪ್ರಸಾದ್**
**ಹಿರಿಯ ಪತ್ರಕರ್ತರು**





ದೇಶವು ಆರ್ಥಿಕ ಬೆಳವಣಿಗೆಯಲ್ಲಿ ಭರವಸೆಯ ಬೆಳಕನ್ನು ಕಾಣುತ್ತಿದೆ. ಹಾಗೆಯೇ, ಜನರಿಗೆ ದುಡಿಮೆಯ ಅವಕಾಶಗಳು ಕೂಡ ಹೆಚ್ಚುತ್ತಿವೆ. ಇದು ಸಂತೋಷದ ಸಂಗತಿ. ಆದರೆ, ಇದರೊಟ್ಟಿಗೆ, ಹವಾಮಾನ ವೈಪರೀತ್ಯ, ವಾಯುಮಾಲಿನ್ಯ, ಜಲಮೂಲಗಳ ಮಾಲಿನ್ಯಗಳೂ ಹೆಚ್ಚುತ್ತಿರುವುದು ಹಾಗೂ ಜನರು ದಿನನಿತ್ಯ ಸೇವಿಸುವ ಹಲವಾರು ಆಹಾರ ಪದಾರ್ಥಗಳು ಕೂಡ ಅಸುರಕ್ಷಿತವೆಂಬುದು ದೃಢಪಡುತ್ತಿರುವುದು ಕಳವಳಕಾರಿಯಾಗಿವೆ. ತ್ವರಿತ ನಗರೀಕರಣದಿಂದಾಗಿ ಬಹಳಷ್ಟು ಜನರಿಗೆ ಮನೆ ಹೊರಗಿನ ಆಹಾರ ಸೇವನೆಯು ಅನಿವಾರ್ಯದ ಜೊತೆಗೆ ಬದುಕಿನ ಶೈಲಿಯ ಭಾಗವೂ ಆಗುತ್ತಿದೆ. ಇಂತಹ ಸನ್ನಿವೇಶದಲ್ಲಿ, ಜನರಿಗೆ ತಾವು ಯಾವುದೇ ಸ್ಥಳದಲ್ಲಿ ಸೇವಿಸುವ ಆಹಾರವು ಸುರಕ್ಷಿತ ಎಂಬ ವಿಶ್ವಾಸ ಮೂಡಿಸುವುದು ಬಹಳ ಮುಖ್ಯವಾಗುತ್ತದೆ. ಇದರ ಮಹತ್ತ್ವವನ್ನು ಮನಗಂಡು ರಾಜ್ಯದ ಆರೋಗ್ಯ ಇಲಾಖೆಯು ತಪಾಸಣೆ, ಪರೀಕ್ಷೆ, ನಿಯಮಗಳನ್ನು ಮೀರಿದವರ ವಿರುದ್ಧ ಮೊಕದ್ದಮೆ ದಾಖಲಿಸುವುದು, ಮಾರಕ ರಾಸಾಯನಿಕಗಳ ಬಳಕೆಗೆ ನಿಷೇಧವನ್ನು ಹೇರುವುದು, ಗ್ರಾಹಕರಲ್ಲಿ ಜಾಗೃತಿ ಮೂಡಿಸುವುದು – ಹೀಗೆ ಹಲವು ಕ್ರಮಗಳನ್ನು ಕೈಗೊಳ್ಳುತ್ತಿದೆ.

ಕಳೆದ ವರ್ಷ ಈ ಉಪಕ್ರಮ ಆರಂಭಿಸಿದ ಆರೋಗ್ಯ ಇಲಾಖೆಯು ಕಾಟನ್‌ಕ್ಯಾಂಡಿ, ಗೋಬಿ ಮಂಚೂರಿ, ಕರಿದ ಹಸಿರು ಬಟಾಣಿ, ಚಿಕನ್ ಕಬಾಬ್, ಫಿಷ್ ಕಬಾಬ್, ಇಡ್ಲಿ, ಬಾಟಲಿ ನೀರು ಸೇರಿದಂತೆ ವಿವಿಧ ಆಹಾರ ಪದಾರ್ಥಗಳ 45,000ಕ್ಕೂ ಹೆಚ್ಚು ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯಗಳಲ್ಲಿ ಪರೀಕ್ಷೆಗೆ ಒಳಪಡಿಸಿದೆ. ಯಾವ್ಯಾವ ಆಹಾರ ಪದಾರ್ಥಗಳಲ್ಲಿ ಯಾವ್ಯಾವ ಹಾನಿಕಾರಕ ರಾಸಾಯನಿಕಗಳು ಬಳಕೆಯಾಗುತ್ತಿವೆ ಎಂಬುದನ್ನು ದೃಢಪಡಿಸಿಕೊಂಡು, ನಿಯಮಾನುಸಾರ ಕ್ರಮ ಜರುಗಿಸುತ್ತಿದೆ.

ಮಕ್ಕಳು ನೋಡಿದೊಡನೆ ಇಷ್ಟಪಡುವ ಬಣ್ಣದ ಕಾಟನ್ ಕ್ಯಾಂಡಿಯಲ್ಲಿ (ಬಾಂಬೆ ಮಿಠಾಯಿ) ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಹಾನಿಕಾರಕ ಅಂಶಗಳಿರುವುದು ಕಂಡುಬಂದಿದೆ. ರಾಜ್ಯದ ವಿವಿಧೆಡೆ ಕಾಟನ್ ಕ್ಯಾಂಡಿಯ 25 ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯ ಪರೀಕ್ಷೆಗೆ ಕಳುಹಿಸಲಾಗಿತ್ತು. ಈ ಪೈಕಿ 15 ಸ್ಯಾಂಪಲ್‌ಗಳಲ್ಲಿ ಸನ್‌ಸೆಟ್‌ಯೆಲ್ಲೊ, ಟಾರ್ಟ್ರಾಝಿನ್ ಹಾಗೂ ರೋಡಮೈನ್–ಬಿ ಕಂಡು ಬಂದಿದ್ದು, ಇವು ಆರೋಗ್ಯಕ್ಕೆ ಹಾನಿಯನ್ನುಂಟು ಮಾಡಬಲ್ಲವು. ರೋಡಮೈನ್.ಬಿ ಕೈಗಾರಿಕಾ ಬಣ್ಣವಾಗಿದ್ದು, ತಜ್ಞರ ಪ್ರಕಾರ ಇದು ಕ್ಯಾನ್ಸರ್‌ಕಾರಕವಾಗಿದೆ. ಹೀಗಾಗಿ, ಇಲಾಖೆಯು ಕಾಟನ್‌ಕ್ಯಾಂಡಿಯಲ್ಲಿ ಈ ಕೃತಕ ಬಣ್ಣಗಳ ಬಳಕೆಯನ್ನು ನಿಷೇಧಿಸಿದೆ. ಆದರೆ, ಬಿಳಿ ಬಣ್ಣದ ಕಾಟನ್ ಕ್ಯಾಂಡಿಯು ಇಂತಹ ರಾಸಾಯನಿಕಗಳಿಂದ ಮುಕ್ತವಾಗಿರುತ್ತದೆ.

ಬಹು ಜನರ ನೆಚ್ಚಿನ ಖಾದ್ಯವಾದ ಗೋಬಿಮಂಚೂರಿಯಲ್ಲೂ ಹಾನಿಕಾರಕ ಕಲರಿಂಗ್ ಏಜೆಂಟ್‌ಗಳು ಪತ್ತೆಯಾಗಿವೆ. ಪರೀಕ್ಷಿಸಲಾದ 171 ಗೋಬಿ ಮಂಚೂರಿ ಮಾದರಿಗಳ ಪೈಕಿ 107ರಲ್ಲಿ ಟಾರ್ಟ್ರಾಝಿನ್, ಸನ್‌ಸೆಟ್‌ಯೆಲ್ಲೊ ಮತ್ತು ಕಾರ್ಮೊಝಿನ್ ಬಳಕೆಯು ದೃಢಪಟ್ಟಿದೆ. ಟಾರ್ಟ್ರಾಝಿನ್ ಅನುಮೋದಿತ ಕೃತಕ ಆಹಾರ ಬಣ್ಣವಾಗಿದ್ದರೂ ಅದರ ಬಳಕೆಗೆ ಸಂಬಂಧಿಸಿದಂತೆ ಕೆಲವು ನಿಬಂಧನೆಗಳಿವೆ. ಯಾವ ಆಹಾರ ಪದಾರ್ಥಗಳಲ್ಲಿ ಅದರ ಪ್ರಮಾಣದ ಯಾವ ಮಿತಿಯೊಳಗೆ ಇರಬೇಕು ಎಂಬ ಬಗ್ಗೆ ಪ್ರಮಾಣೀಕೃತ ಮಟ್ಟಗಳನ್ನು ನಿಗದಿಗೊಳಿಸಲಾಗಿದೆ. ಇದನ್ನು ಪ್ಯಾಕ್ ಮಾಡಲಾದ ಆಹಾರ ಪದಾರ್ಥಗಳಲ್ಲಿ ಉಪಯೋಗಿಸಬಹುದೇ ವಿನಾ ಸಿದ್ಧಪಡಿಸಿದ ತಾಜಾ ಆಹಾರಗಳಲ್ಲಿ ಬಳಸುವಂತಿಲ್ಲ. ಉಲ್ಲಂಘಿಸುವವರಿಗೆ ಎಫ್‌ಎಸ್‌ಎಸ್‌ಎಐ ಕಾಯಿದೆಯಡಿ ಹತ್ತುಲಕ್ಷ ರೂಗಳವರೆಗೆ ದಂಡ, ಪರವಾನಗಿ ರದ್ದತಿ ಹಾಗೂ ಏಳು ವರ್ಷದಿಂದ ಹಿಡಿದು ಜೀವಾವಧಿಯ ವರೆಗೆ ಜೈಲುಶಿಕ್ಷೆ ವಿಧಿಸಬಹುದಾಗಿರುತ್ತದೆ.

ಇನ್ನು ರೆಸ್ಟೋರೆಂಟ್ ಹಾಗೂ ಹೋಟೆಲುಗಳಲ್ಲಿ ಆಹಾರಗಳಿಗೆ ಲಿಕ್ವಿಡ್ ನೈಟ್ರೋಜನ್ ಸೇರ್ಪಡೆಯನ್ನು ಕೂಡ ಸರ್ಕಾರ ನಿಷೇಧಿಸಿದೆ. ಕಳೆದ ವರ್ಷ ಬೆಂಗಳೂರಿನ ರೆಸ್ಟೋರೆಂಟ್‌ವೊಂದರಲ್ಲಿ ಲಿಕ್ವಿಡ್ ನೈಟ್ರೋಜನ್ ಪಾನನ್ನು ತಿಂದ ಬಳಿಕ ಬಾಲಕಿಯ ಹೊಟ್ಟೆಯಲ್ಲಿ ರಂಧ್ರವಾಗಿದ್ದ ಬಗ್ಗೆ ವರದಿಗಳು ಸದ್ದು ಮಾಡಿದ ಹಿನ್ನೆಲೆಯಲ್ಲಿ ಇಲಾಖೆಯು ಪರಿಶೀಲನೆ ನಡೆಸಿ ಈ ಕ್ರಮಕ್ಕೆ ಮುಂದಾಯಿತು. ಆಹಾರದೊಂದಿಗೆ ಶರೀರ ಸೇರುವ ಲಿಕ್ವಿಡ್ ನೈಟ್ರೋಜನ್ ದೇಹದೊಳಗೆ ತಕ್ಷಣವೇ ಆವಿ ರೂಪಕ್ಕೆ ಪರಿವರ್ತನೆಗೊಳ್ಳುವುದರಿಂದ ವ್ಯತಿರಿಕ್ತ ಪರಿಣಾಮಗಳುಂಟಾಗುವ ಸಾಧ್ಯತೆಯಿರುತ್ತದೆ. ಗ್ರಾಹಕರಿಗೆ ನೀಡುವ ಆಹಾರದೊಂದಿಗೆ ಲಿಕ್ವಿಡ್ ನೈಟ್ರೋಜನ್ ಬಳಸುವವರಿಗೆ ಕೂಡ ಕಾನೂನಿನಂತೆ ಏಳು ವರ್ಷದಿಂದ ಹಿಡಿದು ಜೀವಾವಧಿಯ ವರೆಗೆ ಜೈಲು,  ಹತ್ತು ಲಕ್ಷದವರೆಗೆ ದಂಡ ವಿಧಿಸಬಹುದಾಗಿರುತ್ತದೆ.

ಕರಿದ ಹಸಿರು ಬಟಾಣಿಗೆ ಸಂಬಂಧಿಸಿದಂತೆ 114 ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆಗೆ ಕಳುಹಿಸಲಾಗಿತ್ತು. ಇವುಗಳಲ್ಲಿ ಶೇ 70ರಷ್ಟು ಸ್ಯಾಂಪಲ್ಲುಗಳು ತಿನ್ನಲು ಅಸುರಕ್ಷಿತ ಎಂಬುದು ದೃಢಪಟ್ಟಿದೆ. ಮೈಸೂರು ಪಾಕ್‌ನಂತಹ ಸಿಹಿತಿಂಡಿ ಹಾಗೂ ಮಿಕ್ಸ್‌ಚರ್‌ನಂತಹ ಖಾರದ ತಿನಿಸುಗಳಿಗೂ ಕೃತಕ ಬಣ್ಣ ಸೇರಿಸುತ್ತಿರುವುದು ಪರೀಕ್ಷೆಗಳಿಂದ ಕಂಡುಬಂದಿದೆ. ಜಿಲೇಬಿ, ಕೇಕ್, ಖೋವಾ, ಚಟ್ನಿ, ಸಾಸ್, ಕಬಾಬ್ ಸೇರಿ ವಿವಿಧ ಆಹಾರ ಮಾದರಿಗಳು ಜೊತೆಗೆ ಜ್ಯೂಸ್, ಐಸ್‌ಕ್ರೀಂ, ಹಣ್ಣಿನ ಜ್ಯೂಸುಗಳು, ತಂಪು ಪಾನೀಯಗಳ ಮಾದರಿಗಳನ್ನೂ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ವಿಶ್ಲೇಷಣಾ ವರದಿಗಳ ಅನ್ವಯ ಆಹಾರ ಉದ್ದಿಮೆದಾರರಿಗೆ ಎಚ್ಚರಿಕೆ ನೀಡಿ ಅರಿವು ಮೂಡಿಸಲಾಗುತ್ತಿದೆ. ಇಲಾಖೆಯ ಮಾಹಿತಿ ಪ್ರಕಾರ, ಈ ಫಲಿತಾಂಶಗಳ ವರದಿ ಆಧರಿಸಿ 68 ಪ್ರಕರಣಗಳಲ್ಲಿ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ದಾಖಲಿಸಲಾಗಿದೆ.

ಜಿರಲೆ, ಇಲಿ–ಹೆಗ್ಗಣ ಮತ್ತಿತರ ಕ್ರಿಮಿಕೀಟಗಳ ನಿಯಂತ್ರಣಕ್ಕಾಗಿ ತೆಗೆದುಕೊಂಡಿರುವ ಕ್ರಮಗಳನ್ನು ಪರಿಶೀಲಿಸಲು ಸುಮಾರು 600 ಹೋಟೆಲ್/ರೆಸ್ಟೋರೆಂಟುಗಳಲ್ಲಿ ತಪಾಸಣೆ ನಡೆಸಲಾಗಿದೆ. ಈ ಪೈಕಿ 214 ಹೋಟೆಲುಗಳಿಗೆ ನಿಯಮಗಳನ್ನು ಪಾಲಿಸದ ಕಾರಣಕ್ಕಾಗಿ ನೋಟಿಸ್ ನೀಡಲಾಗಿದ್ದರೆ, 11 ಪ್ರಕರಣಗಳಲ್ಲಿ  1.15 ಲಕ್ಷರೂಗಳ ವರೆಗೆ ದಂಡ ವಿಧಿಸಲಾಗಿದೆ. ಕೆಲವು ಪ್ರಕರಣಗಳಲ್ಲಿ, ನಿಯಮಗಳ ಉಲ್ಲಂಘನೆಗಾಗಿ ಐಸ್ ಕ್ಯಾಂಡಿ ಮತ್ತು ಐಸ್‌ಕ್ರೀಂ ತಯಾರಿಕಾ ಘಟಕಗಳಿಗೆ ದಂಡ ವಿಧಿಸಲಾಗಿದೆ.

ಇನ್ನು, ಬಾಟಲಿಯಲ್ಲಿನ ಕುಡಿಯುವ ನೀರಿನ ಪೈಕಿ 2/3ನೇ ಭಾಗದಷ್ಟು (ಅಂದರೆ ಸುಮಾರು ಶೇಕಡಾ 66ರಷ್ಟು) ಕುಡಿಯಲು ಅಸುರಕ್ಷಿತ ಎಂಬುದು ಕಂಡು ಬಂದಿದೆ. ಪ್ರಯೋಗಾಲಯ ಪರೀಕ್ಷೆಗೆ ಕಳಿಸಲಾಗಿದ್ದ 296 ನೀರಿನ ಮಾದರಿಗಳಲ್ಲಿ 72 ಮಾದರಿಗಳು (ಶೇ 28) ಸುರಕ್ಷಿತವೆಂದು ದೃಢಪಟ್ಟಿವೆ. ಉಳಿದಂತೆ, 95 ಮಾದರಿಗಳು ಅಸುರಕ್ಷಿತವೆಂಬುದು ಕಂಡು ಬಂದಿದ್ದರೆ, 88 ಮಾದರಿಗಳ ಗುಣಮಟ್ಟ ಕಳಪೆ ಎಂಬುದು ಪತ್ತೆಯಾಗಿದೆ. ಬಾಟಲಿ ನೀರಿನಲ್ಲಿ ಕ್ರಿಮಿನಾಶಕ, ಫ್ಲೋರೈಡ್, ಕರಗಿದ ಕ್ಯಾಲ್ಸಿಯಂ ಮತ್ತು ಮೆಗ್ನೀಷಿಯಂ ಕಣಗಳು ಕಂಡುಬಂದಿವೆ.

ತರಕಾರಿ ಕಬಾಬ್, ಚಿಕನ್ ಕಬಾಬ್, ಫಿಷ್ ಕಬಾಬ್‌ಗಳಲ್ಲೂ ಕೃತಕ ಬಣ್ಣಗಳ ಬಳಕೆ ದೃಢಪಟ್ಟಿದೆ. ರಾಜ್ಯದ ವಿವಿಧೆಡೆಗಳಲ್ಲಿ ಸಂಗ್ರಹಿಸಿದ್ದ 314 ಕಬಾಬ್ ಮಾದರಿಗಳ ಪೈಕಿ 86 ಮಾದರಿಗಳು ಅಸುರಕ್ಷಿತವೆಂಬುದು ಕಂಡುಬಂದಿದೆ. ಕಬಾಬ್‌ನಲ್ಲಿ ಹಾನಿಕಾರಕ ಸನ್‌ಸೆಟ್‌ಯೆಲ್ಲೊ ಮತ್ತು ಕಾರ್ಮೊಝಿನ್ ಬಳಕೆ ದೃಢಪಟ್ಟಿದೆ. ಈ ಹಿನ್ನೆಲೆಯಲ್ಲಿ, ಸರ್ಕಾರವು ಕಬಾಬ್‌ಗಳಲ್ಲಿ ಈ ಕೃತಕ ಬಣ್ಣಗಳ ಸೇರ್ಪಡೆಯನ್ನು ನಿಷೇಧಿಸಿದೆ. ಆಹಾರ ಸುರಕ್ಷತೆ ಮತ್ತು ಪ್ರಮಾಣೀಕರಣ ಕಾಯಿದೆ ಪ್ರಕಾರ ಈ ಬಣ್ಣಗಳನ್ನು ಸೇರ್ಪಡೆಗೊಳಿಸುವ ಕಬಾಬ್ ತಯಾರಿಕೆ ಹಾಗೂ ಮಾರಾಟಗಾರರ ಮೇಲೆ ಕಾನೂನು ಕ್ರಮ ಜರುಗಿಸಲು ಅವಕಾಶವಿದೆ.

### ಇಡ್ಲಿ ಬೇಯಿಸಲು ಪ್ಲ್ಯಾಸ್ಟಿಕ್!:

ಮತ್ತೊಂದು ಜನಪ್ರಿಯ ತಿಂಡಿಯಾದ ಇಡ್ಲಿಯೂ ಈ ವಿಷವರ್ತುಲಕ್ಕೆ ಸಿಲುಕಿದೆ. ಇಡ್ಲಿ ಬೇಯಿಸಲು ಪ್ಲ್ಯಾಸ್ಟಿಕ್ ಬಳಸುತ್ತಿರುವುದೇ ಇದಕ್ಕೆ ಕಾರಣವಾಗಿದೆ. ಪ್ಲ್ಯಾಸ್ಟಿಕ್ ಅನ್ನು ಹೆಚ್ಚಿನ ಉಷ್ಣತೆಯಲ್ಲಿ ಬಿಸಿ ಮಾಡಿದಾಗ ಅದು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಬಿಸ್‌ಫೆನಾಲ್–ಎ (ಬಿಪಿಎ), ಥ್ಯಾಲೇಟುಗಳು, ಮತ್ತಿತರ ರಾಸಾಯನಿಕಗಳನ್ನು ಬಿಡುಗಡೆಗೊಳಿಸುತ್ತದೆ. ಸಂಗ್ರಹಿಸಿ ಕಳಿಸಲಾಗಿದ್ದ 251 ಇಡ್ಲಿ ಮಾದರಿಗಳ ಪೈಕಿ 54 ಸ್ಯಾಂಪಲ್ಲುಗಳು ಸೇವನೆಗೆ ಅಸುರಕ್ಷಿತ ಎಂಬುದು ಕಂಡುಬಂದಿದೆ. ಪ್ಲ್ಯಾಸ್ಟಿಕ್ ಅನ್ನು ಬಿಸಿ ಮಾಡಿದಾಗ ಪ್ಲಾಸ್ಟಿಕ್ಕಿನಿಂದ ಅಂತಃಸ್ರಾವಕ ಗ್ರಂಥಿಗಳ ಮೇಲೆ ದುಷ್ಪರಿಣಾಮ ಬೀರುವ ರಾಸಾಯನಿಕಗಳು ಬಿಡುಗಡೆಗೊಳ್ಳುತ್ತವೆ. ಕೆಲ ಮಾದರಿಯ ಪ್ಲ್ಯಾಸ್ಟಿಕ್‌ಗಳು ಡಯಾಕ್ಸಿನ್ ಹಾಗೂ ಮೈಕ್ರೋ ಪ್ಲ್ಯಾಸ್ಟಿಕ್‌ಗಳನ್ನೂ ಹೊರಸೂಸುತ್ತವೆ.

▶▶ 7ನೇ ಪುಟಕ್ಕೆ...



**“ ಆಹಾರ ಸುರಕ್ಷತೆ ಖಾತರಿಪಡಿಸುವ ದಿಸೆಯಲ್ಲಿ ಆರೋಗ್ಯ ಇಲಾಖೆಯು ತಪಾಸಣೆ, ಪರೀಕ್ಷೆ, ಮೊಕದ್ದಮೆ ದಾಖಲಿಸುವ ಪ್ರಕ್ರಿಯೆ, ಜಾಗೃತಿ ಮೂಡಿಸುವಿಕೆ ಇವುಗಳನ್ನು ಮುಂದುವರಿಸಲಿದೆ. ಜೊತೆಗೆ, ಇದನ್ನು ಇನ್ನಷ್ಟು ವ್ಯಾಪಕಗೊಳಿಸಲಾಗುವುದು. ತಯಾರಕರು, ಮಾರಾಟಗಾರರು, ಗ್ರಾಹಕರು ಎಲ್ಲರೂ ತಮ್ಮ ಜವಾಬ್ದಾರಿ ಅರಿತು ಆ ಪ್ರಕಾರ ನಡೆದುಕೊಂಡರೆ ಗುಣಮಟ್ಟದ ಆಹಾರದ ಮೂಲಕ ಒಟ್ಟಾರೆ ಸಮುದಾಯ ಆರೋಗ್ಯದ ಮಟ್ಟವನ್ನು ಹೆಚ್ಚಿಸಬಹುದು.**

**– ದಿನೇಶ್‌ಗುಂಡೂರಾವ್**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ**

## ಬೀದಿಬದಿ ವ್ಯಾಪಾರಿಗಳಿಗೆ ತರಬೇತಿ

ಆಹಾರ ಪದಾರ್ಥಗಳಿಗೆ ಕೃತಕ ಬಣ್ಣಗಳನ್ನು ಸೇರಿಸದಿರಲು ಹಾಗೂ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ ಬಗ್ಗೆ ಅರಿವು ಮೂಡಿಸಲು ಬೀದಿಬದಿ ವ್ಯಾಪಾರಿಗಳಿಗೆ ಆಹಾರ ಇಲಾಖೆ ವತಿಯಿಂದ ಆಹಾರೋದ್ಯಮ ಸಂಸ್ಥೆಗಳ ಸಹಯೋಗದಲ್ಲಿ ತರಬೇತಿ ನೀಡಲಾಗುತ್ತಿದೆ. 2024–25 ಹಾಗೂ 2025–26ನೇ ಸಾಲಿನಲ್ಲಿ ಈವರೆಗೆ 13,585 ಸಣ್ಣಉದ್ದಿಮೆದಾರರು ಹಾಗೂ 7,506 ಹೋಟೆಲ್ ಉದ್ದಿಮೆದಾರರಿಗೆ ತರಬೇತಿ ನೀಡಲಾಗಿದೆ.

### ಕುರುಕಲು ತಿಂಡಿಗೆ ಕಡಿವಾಣ


ಶಾಲಾ ಹಂತದಲ್ಲಿ ವಿದ್ಯಾರ್ಥಿಗಳ ಜಂಕ್‌ಫುಡ್ (ಕುರುಕಲು ತಿನಿಸು) ಸೇವನೆಗೆ ಕಡಿವಾಣ ಹಾಕುವ ಉದ್ದೇಶದಿಂದ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುವಂತೆ ಕೇಂದ್ರ ಪ್ರೌಢಶಿಕ್ಷಣ ಮಂಡಳಿಯು (ಸಿಬಿಎಸ್‌ಇ) ಇತ್ತೀಚೆಗೆ ಸುತ್ತೋಲೆಯೊಂದನ್ನು ಹೊರಡಿಸಿದೆ.

ಪ್ಯಾಕ್ ಮಾಡಲಾಗುವ ಆಹಾರಗಳ ಬಾಳಿಕೆ ಅವಧಿಯನ್ನು (ಶೆಲ್ಫ್‌ಲೈಫ್) ಹೆಚ್ಚಿಸಲು ಬಳಸಲಾಗುವ ಸೋಡಿಯಂಯುಕ್ತ ಉಪ್ಪು ಆರೋಗ್ಯಕ್ಕೆ ಹಾನಿಕಾರಕವಾದದ್ದರಿಂದ ಅದರ ಬಳಕೆ ಕಡಿಮೆಗೊಳಿಸಬೇಕೆಂಬುದು ತಜ್ಞರ ಅಭಿಮತವಾಗಿದೆ. ಸಂಸ್ಕರಿತ (ಪ್ರೊಸೆಸ್ಡ್) ಹಾಗೂ ಅಲ್ಟ್ರಾ–ಪ್ರೊಸೆಸ್ಡ್ ಆಹಾರಗಳ ಬಳಕೆಯು ಹಲವು ರೀತಿಗಳಲ್ಲಿ ದುಷ್ಪರಿಣಾಮ ಬೀರುವುದರಿಂದ ಈ ಬಗ್ಗೆಯೂ ಅರಿವು ಮೂಡಿಸಬೇಕೆಂಬ ಆಗ್ರಹಗಳು ಕೇಳಿಬಂದಿವೆ.

ಸುರಕ್ಷಿತ ಆಹಾರ ಖಾತರಿಗೆ ಸಂಬಂಧಿಸಿದಂತೆ ಇಲಾಖೆಯ ವತಿಯಿಂದ ಪರೀಕ್ಷೆಗಳನ್ನು ನಡೆಸುತ್ತಿರುವುದು ಸಕಾರಾತ್ಮಕ ಪರಿಣಾಮ ಬೀರುತ್ತಿದೆ. ಇದರಿಂದ ನಾಗರಿಕರಲ್ಲಿ ತಾವು ಸೇವಿಸುವ ಆಹಾರ ಸುರಕ್ಷಿತವೇ, ಅಲ್ಲವೇ ಎಂದು ಖಚಿತಪಡಿಸಿಕೊಳ್ಳುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಕೇಕ್, ಕಬಾಬ್ ಇನ್ನಿತರ ಪದಾರ್ಥಗಳಲ್ಲಿ ಕೃತಕ ಬಣ್ಣಗಳ ಬಳಕೆ ಪ್ರಕರಣಗಳು ಕಡಿಮೆಯಾಗುತ್ತಿರುವುದು ಕಂಡುಬಂದಿದೆ.

– ಶ್ರೀನಿವಾಸ್. ಕೆ
**ಆಯುಕ್ತರು,  ಆಹಾರ ಸುರಕ್ಷತೆ ವಿಭಾಗ, ಆರೋಗ್ಯ ಇಲಾಖೆ, ಕರ್ನಾಟಕ ಸರ್ಕಾರ**

## ನೆನಪಿನಲ್ಲಿಡಬೇಕಾದ ಮಾತು



"ಸನ್ನಡತೆಯ ಗೃಹವೊಂದನ್ನು ಸರಿಗಟ್ಟುವಂತಹ ಯಾವ ಶಾಲೆಯೂ ಇರಲಾರದು: ಪ್ರಾಮಾಣಿಕ, ಸದ್ಗುಣಶೀಲ ಪೋಷಕರಿಗೆ ಸಮನಾಗುವಂತಹ ಯಾವ ಬೋಧಕರೂ ಇರಲಾರರು.

ಸತ್ಯದತ್ತ ಸ್ಥಿರವಾದ ಆಸಕ್ತಿಯಿಂದ ನನಗೆ ಬಲ ಬರುತ್ತದೆಯೇ ಹೊರತು ನನ್ನಲ್ಲಿ ಇನ್ನಾವ ಶಕ್ತಿಯೂ ಇಲ್ಲ. ಅಹಿಂಸಾ ಮನೋಭಾವವೂ ಕೂಡ ಇದೇ ಆಸಕ್ತಿಯಿಂದ ಹುಟ್ಟುತ್ತದೆ.

ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಸಮಾನ ಭಾವನೆಯಿಂದಿರಲು ಅಸ್ಪೃಶ್ಯತೆಯ ಬಗೆಗಿನ ಹೋರಾಟ ಅಗತ್ಯ.

**ಮಹಾತ್ಮ ಗಾಂಧೀಜಿ**
(ಎಂ.ವಿ. ನಾಗರಾಜರಾವ್ 'ಗಾಂಧಿ ನಡೆ ಹಾದಿ' ಗ್ರಂಥದಿಂದ ಆಯ್ದ ಭಾಗ)

▶▶ 6ನೇ ಪುಟದಿಂದ

ತಜ್ಞ ವೈದ್ಯರ ಪ್ರಕಾರ, ಇವು ದೇಹದಲ್ಲಿ ಶೇಖರಣೆಗೊಂಡು ಕ್ಯಾನ್ಸರ್ ಅಪಾಯವನ್ನು ಹೆಚ್ಚಿಸುತ್ತವೆ. ದೇಹವನ್ನು ಸೇರುವ ಪ್ಲಾಸ್ಟಿಕ್ ಕಣಗಳು ಉರಿಯೂತಕ್ಕೆ ಕಾರಣವಾಗಿ ಶರೀರದ ಪ್ರತಿರೋಧ ವ್ಯವಸ್ಥೆಯನ್ನು ದುರ್ಬಲಗೊಳಿಸಬಹುದು. ಜೊತೆಗೆ, ಕರುಳಿನಲ್ಲಿನ ಬ್ಯಾಕ್ಟೀರಿಯಾಗಳ ಮೇಲೂ ಅಡ್ಡಪರಿಣಾಮ ಬೀರಿ ಪಚನ ಕ್ರಿಯೆಯಲ್ಲಿ ವ್ಯತ್ಯಯಗಳನ್ನು ಉಂಟುಮಾಡಬಹುದು. ಕೆಲವು ಪ್ಲಾಸ್ಟಿಕ್ ರಾಸಾಯನಿಕಗಳು ನರಜಾಲ ವ್ಯವಸ್ಥೆಗೆ ಹಾನಿಯೆಸಗಿ ಜ್ಞಾಪಕಶಕ್ತಿಯ ನಾಶ, ತಲೆನೋವು ಮತ್ತು ಮಕ್ಕಳಲ್ಲಿ ಬೆಳವಣಿಗೆ ಸಂಬಂಧಿತ ನ್ಯೂನತೆಗಳು, ಹಾರ್ಮೋನುಗಳ ಅಸಮತೋಲನ, ಸ್ತನಕ್ಯಾನ್ಸರ್ ಹಾಗೂ ಪ್ರಾಸ್ಟೇಟ್ ಕ್ಯಾನ್ಸರ್‌ಗಳನ್ನು ತಂದೊಡ್ಡಬಲ್ಲವು ಎಂದೂ ಹೇಳಲಾಗುತ್ತದೆ.



ಕಡ್ಲೆ ಮಿಠಾಯಿಯಲ್ಲಿ (ಚಿಕ್ಕಿ) ಸಕ್ಕರೆ ಅಂಶವು ನಿಗದಿಗಿಂತ ಜಾಸ್ತಿ ಇರುವ ಬಗ್ಗೆ, ಬೆಲ್ಲದ ತೂಕವನ್ನು ಹೆಚ್ಚಿಸಿ ಅದಕ್ಕೆ ಹೊಂಬಣ್ಣದ ಹೊಳಪು ಮೂಡಿಸಲು ವಾಷಿಂಗ್ ಸೋಡಾ (ಸೋಡಿಯಂ ಕಾರ್ಬೋನೇಟ್), ಮೆಟನಿಲ್‌ಯೆಲ್ಲೋ, ಸೀಮೆಸುಣ್ಣದ ಪುಡಿಯನ್ನು ಕಲಬೆರಕೆ ಮಾಡುತ್ತಿರುವ ಪ್ರಕರಣಗಳು ವರದಿಯಾಗಿವೆ. ಇವುಗಳ ಸೇರ್ಪಡೆಯು ಬಾಯಿ ಹಾಗೂ ಗಂಟಲಿನಲ್ಲಿ ಉರಿ ತಂದೊಡ್ಡುವ ಜೊತೆಗೆ ಮೂತ್ರಪಿಂಡ ಹಾನಿಗೆ ಎಡೆ ಮಾಡಿಕೊಡುವ ಅಪಾಯವಿದೆ ಎಂಬುದು ತಜ್ಞರ ಎಚ್ಚರಿಕೆಯಾಗಿದೆ.

ಪಾನಿಪೂರಿಗೆ ಬಳಸುವ ಸಾಸ್, ಸ್ವೀಟ್ ಚಿಲ್ಲಿಪೌಡರ್‌ಗಳಲ್ಲಿ ಸನ್‌ಸೆಟ್‌ಯೆಲ್ಲೊ, ಬ್ರಿಲಿಯಂಟ್ ಬ್ಲ್ಯೂ, ಕಾರ್ಮೋಝೀನ್‌ಗಳ ಬಳಕೆ ಪತ್ತೆಯಾಗಿದೆ. ಚಾಟ್‌ಗಳ ಸ್ವಾದ ಹೆಚ್ಚಿಸಿ ಬಣ್ಣದಿಂದ ಆಕರ್ಷಿಸುವ ಸಲುವಾಗಿ ಸಾಸ್‌ಗಳಿಗೆ ಹಾನಿಕಾರಕ ರಾಸಾಯನಿಕಗಳನ್ನು ಸೇರಿಸಲಾಗುತ್ತಿದೆ ಎನ್ನಲಾಗಿದೆ. ಕೇಕ್ ಸ್ಯಾಂಪಲ್ಲುಗಳಲ್ಲಿ ಕ್ಯಾನ್ಸರ್‌ಕಾರಕಗಳಾದ ಅಲ್ಯೂರಾರೆಡ್, ಸನ್‌ಸೆಟ್‌ಯೆಲ್ಲೊ, ಟಾರ್ಟ್ರಾಝೀನ್ ಇತ್ಯಾದಿ ಕೆಮಿಕಲ್‌ಗಳು ಪತ್ತೆಯಾಗಿದ್ದು, ಕೇಕ್‌ಗೆ ಇವುಗಳ ಸೇರ್ಪಡೆಯನ್ನು ನಿಷೇಧಿಸಲಾಗಿದೆ. ಅತ್ಯುತ್ತಮ ಪ್ರೋಟೀನ್ ಆಕರ ಎನ್ನಲಾಗುವ ಪನ್ನೀರ್‌ನ ಮಾದರಿಗಳಲ್ಲಿ ಕೂಡ ಹಾನಿಕಾರಕ ಬ್ಯಾಕ್ಟೀರಿಯಾ ಹಾಗೂ ಅನಪೇಕ್ಷಿತ ಆಡಿಟಿವ್‌ಗಳ ಇರುವಿಕೆ ಕಂಡು ಬಂದಿದೆ. ಶವರ್ಮಾ ಖಾದ್ಯದ ಸ್ಯಾಂಪಲ್ಲುಗಳಲ್ಲಿ ಹಾನಿಕಾರಕ ಬ್ಯಾಕ್ಟೀರಿಯಾಗಳು ಕಂಡುಬಂದಿದ್ದರೆ, ಕೇರಳ ಮೂಲದಿಂದ ಪೂರೈಕೆಯಾಗುತ್ತಿರುವ ಸುಮಾರು 30 ಕುರುಕಲು ತಿಂಡಿಗಳು ಸುರಕ್ಷಿತವಲ್ಲ ಎಂಬುದು ದೃಢಪಟ್ಟಿದೆ.

### ಆಹಾರ ಪಾರ್ಸೆಲ್‌ಗೆ ಪ್ಲಾಸ್ಟಿಕ್, ಮುದ್ರಿತ ಪೇಪರ್ ಬೇಡ:

ಪ್ಲಾಸ್ಟಿಕ್ ಬಳಕೆಯು ಸುಗಮ ವ್ಯಾಪಾರಕ್ಕೆ ಅನುಕೂಲಕರ. ಹೀಗಾಗಿಯೇ, ಹೋಟೆಲ್ ಹಾಗೂ ಬೀದಿಬದಿ ವ್ಯಾಪಾರಿಗಳು ಆಹಾರ ಪಾರ್ಸೆಲ್ ಮಾಡಲು ಹೆಚ್ಚಾಗಿ ಪ್ಲಾಸ್ಟಿಕ್ ಬಳಸುತ್ತಾರೆ. ಆದರೆ, ಬಿಸಿ ಕಾಫಿ, ಚಹಾ, ಸಾಂಬಾರ್, ಅನ್ನ, ಚಪಾತಿಗಳನ್ನು ಪ್ಲಾಸ್ಟಿಕ್ ಚೀಲದಲ್ಲಿ ಕಟ್ಟುವುದು ಆರೋಗ್ಯಕ್ಕೆ ಮಾರಕ. ಹಾಗೆಯೇ ಬಿಸಿ ಬಜ್ಜಿ, ಬೋಂಡಾ, ವಡೆ ಇತ್ಯಾದಿ ಕರಿದ ಆಹಾರ ಪದಾರ್ಥಗಳನ್ನು ಇಡಲು ಅಥವಾ ಕಟ್ಟಿಕೊಡಲು ಮುದ್ರಿತ ನ್ಯೂಸ್ ಪೇಪರ್ ಬಳಸುವುದು, ಹೆಂಚಿನಿಂದ ತೆಗೆದ ಬಿಸಿ ಹೋಳಿಗೆಯನ್ನು ಪ್ಲಾಸ್ಟಿಕ್ ಷೀಟ್ ಅಥವಾ ಮುದ್ರಿತ ಪೇಪರ್ ಮೇಲೆ ಆರಲು ಹಾಕುವುದು – ಇವು ಪ್ರಾಣಾಂತಿಕ ಭಾರ ಲೋಹಗಳಿಗೆ ಶರೀರವನ್ನು ಸೇರಲು ಅನುವು ಮಾಡಿಕೊಡುವುದರಿಂದ, ಈ ಬಗ್ಗೆ ಎಚ್ಚರ ವಹಿಸಬೇಕಾದ ಅಗತ್ಯವಿದೆ.

ಆಹಾರ ಸುರಕ್ಷತೆ ಎಂಬುದು ಗ್ರಾಹಕರು, ಮಾರಾಟಗಾರರು, ತಯಾರಕರು ಎಲ್ಲರೂ ಸೇರಿ ಸಾಧಿಸಬೇಕಾದ ಗುರಿಯಾಗಿದೆ. ಈ ದಿಸೆಯಲ್ಲಿ, ಇಲಾಖೆಯು ಕಾಲಕಾಲಕ್ಕೆ ಪರೀಕ್ಷಾ ವರದಿಗಳನ್ನು ಬಿಡುಗಡೆಗೊಳಿಸಿ ಸಮುದಾಯದಲ್ಲಿ ಜಾಗೃತಿ ಹೆಚ್ಚಿಸುವ ಕಾರ್ಯವನ್ನು ಕೂಡ ಮಾಡುತ್ತಿದೆ. ಒಂದೆಡೆ, ಜನರಿಗೆ ಅನುಕೂಲವಾಗಲೆಂದು ಆರೋಗ್ಯಸೇವೆಗೆ ಸಂಬಂಧಿಸಿದ ಮೂಲಸೌಕರ್ಯ ಹೆಚ್ಚಿಸಲು ಪ್ರಯತ್ನಗಳೇನೋ ನಡೆಯುತ್ತಿವೆ. ಆದರೆ, ತಿನ್ನುವ ಆಹಾರಗಳೇ ನಂಜಿನ ಮೂಲಗಳಾದರೆ ಸುಸಜ್ಜಿತ ವ್ಯವಸ್ಥೆ ಕೂಡ ವ್ಯರ್ಥವಾಗುತ್ತದೆ. ಅನಾರೋಗ್ಯವು ದೇಶಕ್ಕೆ ಹೊರೆಯಾಗಿ ಪರಿಣಮಿಸುತ್ತದೆ. ಇದನ್ನು ಮನಗಂಡು ಸಮುದಾಯದ ಒಟ್ಟಾರೆ ಆರೋಗ್ಯವೃದ್ಧಿಗಾಗಿ ಆಹಾರಗಳ ಗುಣಮಟ್ಟವನ್ನು ಖಾತರಿಗೊಳಿಸಲು ಹಾಗೂ ಜಾಗೃತಿ ಮೂಡಿಸಲು ಇಲಾಖೆಯು ಕ್ರಮಗಳನ್ನು ಮುಂದುವರಿಸಿದೆ.

### ಪರೀಕ್ಷಾ ಅಭಿಯಾನದಲ್ಲಿ ಸಂಗ್ರಹಿಸಿದ ಮಾದರಿಗಳ ವಿವರ:

| ತಿನಿಸು–ಪಾನೀಯ | ಸಂಗ್ರಹಿಸಿದ ಮಾದರಿಗಳ ಸಂಖ್ಯೆ | ಅಸುರಕ್ಷಿತ ಮಾದರಿಗಳು | ಅಸುರಕ್ಷಿತ ಮಾದರಿಗಳ ಶೇಕಡಾವಾರು |
|---|---|---|---|
| ಬಾಂಬೆ ಮಿಠಾಯಿ | 61 | 24 | 39.34% |
| ಶುಗರ್ ಕ್ಯಾಂಡಿ | 135 | 05 | 3.7% |
| ಮೈಸೂರು ಪಾಕು | 191 | 24 | 12.57% |
| ತಂಪು ಪಾನೀಯ/ ಜ್ಯೂಸು | 207 | 01 | 0.48% |
| ಐಸ್‌ಕ್ರೀಂ | 175 | 01 | 0.57% |
| ಕಬಾಬ್ | 314 | 86 | 27.39% |
| ಸಾಸ್ | 160 | 33 | 20.63% |
| ಚಟ್ನಿ | 147 | 13 | 8.84% |
| ಗೋಬಿ ಮಂಚೂರಿ | 210 | 30 | 14.29% |
| ಕೇಕ್ | 898 | 19 | 2.12% |
| ಖೋವಾ | 100 | 00 | 0.00% |
| ಸ್ವೀಟ್‌ಗಳು (ಸಿಹಿ ತಿನಿಸು) | 606 | 24 | 3.96% |
| ಕರಿದ ಹಸಿರು ಬಟಾಣಿ | 114 | 69 | 60.53% |
| ಖಾರಾ ಮಿಕ್ಸ್‌ಚರ್ | 162 | 43 | 26.54% |
| ಶರಬತ್ತು | 143 | 00 | 0.00% |
| ಜಿಲೇಬಿ | 164 | 02 | 1.22% |

# ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಶಿಕ್ಷಕರ ದಿನಾಚರಣೆ




ತುಮಕೂರು ನಗರದ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ವತಿಯಿಂದ ಹಳೆಯ ವಿದ್ಯಾರ್ಥಿಗಳ ಸಂಘಗಳ ಸಂಯುಕ್ತಾಶ್ರಯದಲ್ಲಿ ಶಿಕ್ಷಕರ ದಿನಾಚರಣೆಯನ್ನು ಸೆಪ್ಟೆಂಬರ್ 9ರಂದು ಹಮ್ಮಿಕೊಳ್ಳಲಾಗಿತ್ತು.

ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ. ಎಂ.ಆರ್. ರಮಣ್ ಹುಲಿನಾಯ್ಕರ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾಡುನಾಡುತ್ತಾ "ನೈತಿಕ ಮೌಲ್ಯ ಮತ್ತು ಶಿಸ್ತುಬದ್ಧ ಜೀವನಾದರ್ಶ ಸಮಾಜದ ನಿರ್ಮಾಣಕ್ಕೆ ಬೇಕಾಗಿರುವ ನಿಜವಾದ ಸಂಪನ್ಮೂಲ. ಜೀವನದಲ್ಲಿ ಗುರುವನ್ನು ಕಂಡುಕೊಳ್ಳುವುದು ಅತ್ಯಂತ ಮಹತ್ತ್ವದ ವಿಷಯ. ಗುರುವೇ ಜೀವನದ ದಾರಿದೀಪ. ಗುರುಗಳು ಕೇವಲ ಪಾಠ ಹೇಳುವವರು ಮಾತ್ರವಲ್ಲ, ಅವರು ವಿದ್ಯಾರ್ಥಿ ಜೀವನದ ಮೂಲ ಪ್ರೇರಕರು. ಅವರಿಂದಲೇ ಸಮಾಜದಲ್ಲಿ ನಾವು ಒಳ್ಳೆಯ ನಾಗರಿಕರಾಗಲು ಸಾಧ್ಯ. ನೈತಿಕ ಮೌಲ್ಯಗಳು, ಧಾರ್ಮಿಕತೆ ಹಾಗೂ ಶಿಸ್ತಿನ ಜೀವನವೇ ಒಳ್ಳೆಯ ಸಮಾಜದ ಆಧಾರ. ಇಂಥ ಮೌಲ್ಯಗಳನ್ನು ಯುವಜನಾಂಗದಲ್ಲಿ ಬಿತ್ತುವವರೇ ಶಿಕ್ಷಕರು. `Teacher is my inspiration' ಎನ್ನುವುದು ಕೇವಲ ಬಾಯಿಮಾತಿನ ಹೇಳಿಕೆಯಲ್ಲ, ಅದು ಬದುಕಿನ ನಿಜವಾದ ಅನುಭವ. ಗುರುಗಳ ಮಾರ್ಗದರ್ಶನವಿಲ್ಲದೆ. ಜೀವನ ಅಪೂರ್ಣ. ಒಳ್ಳೆಯ ಶಿಕ್ಷಕರು ವಿದ್ಯಾರ್ಥಿಯ ಬದುಕನ್ನು ಪರಿವರ್ತಿಸುತ್ತಾರೆ. `Ethics and moral values are the roots of good life.' ಎನ್ನುವುದನ್ನು ಕಲಿಸುವವರೇ ಶಿಕ್ಷಕರು. ಮನುಷ್ಯನು ಉತ್ತಮ ವ್ಯಕ್ತಿಯಾಗಿ ಬೆಳೆಯಲು ಗುರುಗಳ ಪಾತ್ರ ಮಹತ್ವಪೂರ್ಣವಾದದ್ದು. ಉತ್ತಮ ನಾಗರಿಕ ಸಮಾಜದಲ್ಲಿ ಗುರು ಹಾಗೂ ವೈದ್ಯ ಇಬ್ಬರೂ ಅತ್ಯಂತ ಗೌರವಾನ್ವಿತರು. ವೈದ್ಯರು ದೇಹಕ್ಕೆ ಜೀವ ನೀಡಿದರೆ, ಶಿಕ್ಷಕರು ಮನಸ್ಸಿನ ದೀಪ ಹಚ್ಚುತ್ತಾರೆ. ಇಂದು ಶಿಕ್ಷಕರ ದಿನಾಚರಣೆ. ನಾವು ನಮ್ಮ ಗುರುಗಳಿಗೆ ನಮನ ಸಲ್ಲಿಸಿ, ಅವರಿಂದ ಪಡೆದ ಪ್ರೇರಣೆಯನ್ನು, ಸಮಾಜಕ್ಕೆ ಅರ್ಪಿಸಿದರೆ, ಅದೇ ಅವರಿಗೆ ನಾವು ತೋರುವ ನಿಜವಾದ ಕೃತಜ್ಞತೆ" ಎಂದು ಅಭಿಪ್ರಾಯಪಟ್ಟರು.

"ಒಂದು ಅಕ್ಷರ ಕಲಿಸಿದರೂ ಆತ ಗುರು. ಪ್ರತಿಯೊಬ್ಬರ ಜೀವನದಲ್ಲೂ ಗುರುಗಳು ಅಮೋಘ ಪಾತ್ರವನ್ನು ವಹಿಸುತ್ತಾರೆ. ಗುರು ದೇವರಿಗಿಂತಲೂ ಎತ್ತರ. ವಿದ್ಯಾರ್ಥಿ ಯಶಸ್ಸು ಗಳಿಸಿದಾಗ ಸಹೋದರ, ಸ್ನೇಹಿತರು ಅಷ್ಟೇನು ಖುಷಿಪಡುವುದಿಲ್ಲ. ತಮ್ಮ ಶಿಷ್ಯ ಎಂತಹ ಸಾಧನೆ ಮಾಡಿದ್ದಾನೆ ಎಂದು ಅವನ ಗುರುಗಳು ಹೆಮ್ಮೆ ಪಡುತ್ತಾರೆ" ಎಂದು ಶ್ರೀದೇವಿ ವಿದ್ಯಾಸಂಸ್ಥೆಯಲ್ಲಿ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್ ಪಾಟೀಲ್ ಹೇಳಿದರು.

ಶ್ರೀದೇವಿ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ. ಹರೇಂದ್ರಕುಮಾರ್ ಅವರು "ಈ ವರ್ಷದ ಥೀಮ್ ಎಂದರೆ, ಗುರುಗಳು ಕೇವಲ ಪಾಠ ಹೇಳುವವರಲ್ಲ. ಅವರು ವಿದ್ಯಾರ್ಥಿಗಳಿಗೆ ವ್ಯಕ್ತಿತ್ವವನ್ನು ಕಟ್ಟಿಕೊಡುವವರು, ಸೃಜನಶೀಲತೆ ಬೆಳೆಸುವವರು, ಅವರ ಚಿಂತನೆಗೆ ವೈಚಾರಿಕ ತಿರುವು ಕೊಡುವವರು, ಹೊಸ ಆಲೋಚನೆಗಳನ್ನು ಪ್ರೇರೇಪಿಸುವವರು. ಈ ಅರ್ಹತೆಯಿರುವವರು ಮಾತ್ರ ನಿಜವಾದ ಗುರುಗಳಾಗುತ್ತಾರೆ" ಎಂದರು.

ಈ ಕಾರ್ಯಕ್ರಮದಲ್ಲಿ ಡಾ. ರಾಜೇಶ್ ಅವರಿಗೆ ಅತ್ಯುತ್ತಮ ಶಿಕ್ಷಕ 2025 ಪ್ರಶಸ್ತಿ ನೀಡಿ ಗೌರವಿಸಲಾಯಿತು ವಿದ್ಯಾರ್ಥಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞೆ ಡಾ. ಲಾವಣ್ಯ ರಮಣ್, ಶ್ರೀದೇವಿ ವೈದಿಕ ಮಹಾವಿದ್ಯಾಲಯದ ಉಪ ಪ್ರಾಂಶುಪಾಲ ಡಾ. ರೇಖಾ ಗುರುಮೂರ್ತಿ, ಶ್ರೀದೇವಿ ಆಸ್ಪತ್ರೆಯ ಅಧೀಕ್ಷಕರಾದ ಡಾ. ಕೆ ಮೋಹನ್‌ಕುಮಾರ್, ಸಿಇಓ ಡಾ. ಪ್ರದೀಪ್ ವೇಗಿ, ಡಾ. ಹೇಮಂತ್‌ರಾಜ್, ವಿವಿಧ ವಿಭಾಗದ ಮುಖ್ಯಸ್ಥರು ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

■ ವರದಿ: ಶ್ರುತಿ ಬೆಳ್ಳಿಯಾರ್ ಹೆಚ್.ವಿ.

# ಡಾ.ಬಿ.ಆರ್.ಜಯಮ್ಮ ಅವರಿಗೆ ಶ್ರೀದೇವಿ ರಮಣ ಮಹರ್ಷಿ ಪ್ರಶಸ್ತಿ 2025



ಡಾ. ಕೆ.ಆರ್. ಕಮಲೇಶ್ ರಚಿಸಿರುವ ಅವಧೂತ ಗಟ್ಟಹಳ್ಳಿ ಶ್ರೀ ಅಂಜನಪ್ಪಸ್ವಾಮಿಗಳು ಮತ್ತು ಅವರ ಪರಂಪರೆ ಕೃತಿ ಲೋಕಾರ್ಪಣೆ.




ಡಾ. ಬಿ.ಆರ್.ಜಯಮ್ಮ ಅವರಿಗೆ ಶ್ರೀದೇವಿ ರಮಣ ಮಹರ್ಷಿ ಪುರಸ್ಕಾರ ಪ್ರದಾನ.

▶▶ ಮೊದಲನೇ ಪುಟದಿಂದ

ಆದರೂ ಅವರುಗಳು ಭಾರತದ ಅಧ್ಯಾತ್ಮಶಕ್ತಿಯನ್ನು ಜಗತ್ತಿಗೆ ಅನಾವರಣ ಮಾಡಿ ತೋರಿಸಿದರು. ಜ್ಞಾನದಿಂದ ಪ್ರತಿಯೊಬ್ಬರು ಶ್ರೇಷ್ಠರಾಗಬೇಕು. ಅಂತರಂಗ ಜೀವನದ ಶ್ರೇಷ್ಠತೆ ಬಹಳ ಉತ್ತುಂಗಕ್ಕೆ ಕೊಂಡೊಯ್ಯುತ್ತದೆ ಎಂಬುದಕ್ಕೆ ಗಟ್ಟಹಳ್ಳಿ ಶ್ರೀ ಅಂಜನಪ್ಪಸ್ವಾಮಿಯವರ ಬದುಕೇ ಉತ್ತಮ ಉದಾಹರಣೆಯಾಗಿದೆ" ಎಂದರು.

ಕಲಬುರಗಿ ಲೋಕಸಭಾ ಸದಸ್ಯ ರಾಧಾಕೃಷ್ಣ ದೊಡ್ಡಮನಿ ಅವರು ಡಾ. ಕೆ.ಆರ್. ಕಮಲೇಶ್ ರಚಿಸಿದ 'ಗಟ್ಟಹಳ್ಳಿ ಅವಧೂತ ಶ್ರೀ ಅಂಜನಪ್ಪಸ್ವಾಮಿಗಳು ಮತ್ತು ಅವರ ಪರಂಪರೆ' ಗ್ರಂಥವನ್ನು ಬಿಡುಗಡೆ ಮಾಡಿದರು. ಅದರ ಮೊದಲ ಪ್ರತಿಯನ್ನು ಅಸಗೋಡು ಜಯಸಿಂಹ ಅವರು ಸ್ವೀಕರಿಸಿದರು.

## ಇಲಾಖೆಗೆ ಘನತೆ ತಂದು ಕೊಟ್ಟವರು

ಡಾ. ಕೆ.ಆರ್. ಕಮಲೇಶ್ ಅವರು ರಚಿಸಿರುವ ಗ್ರಂಥವನ್ನು ಪರಿಚಯ ಮಾಡಿಕೊಟ್ಟ ಅಧ್ಯಾತ್ಮ ಚಿಂತಕ ಡಿ.ಡಿ. ಮಾಳಗಿ ಅವರು "ಶ್ರೀರಾಮಕೃಷ್ಣ ಪರಮಹಂಸರನ್ನು, ಸ್ವಾಮಿ ವಿವೇಕಾನಂದರು ಜಗತ್ತಿಗೆ ಪರಿಚಯಿಸಿದರೆ, ಗುಪ್ತಗಾಮಿನಿಯಾಗಿ, ಎಲೆಮರೆಯ ಕಾಯಿಯಾಗಿ ಗಟ್ಟಹಳ್ಳಿಯಲ್ಲಿದ್ದ ಅವಧೂತ ಶ್ರೀ ಅಂಜನಪ್ಪಸ್ವಾಮಿಗಳನ್ನು ನಾಡಿನ ಅಧ್ಯಾತ್ಮ ಜಗತ್ತಿಗೆ ಪರಿಚಯಿಸಿದವರು ಬಿ.ಪಿ. ರೇವಣ್ಣ ಅವರು. ಸ್ವಾಮಿಗಳ ಭಕ್ತರಾಗಿ, ಶಿಷ್ಯರಾಗಿ, ಕೊನೆಯ ತನಕ ಅವರ ಸೇವೆ ಮಾಡಿದರು. ಬಿ.ಪಿ. ರೇವಣ್ಣ ಅವರ ಇಡೀ ಕುಟುಂಬ, ಶ್ರೀ ಅಂಜನಪ್ಪಸ್ವಾಮಿಗಳ ಸೇವೆಗೆ ಮುಡಿಪಾಗಿತ್ತು. ಸಾಮಾನ್ಯ ಪೊಲೀಸ್ ಇನ್‌ಸ್ಪೆಕ್ಟರ್ ಆಗಿ ಸೇವೆಗೆ ಸೇರಿದ್ದ ರೇವಣ್ಣ ಅವರು, ಅನಂತರ ಐಪಿಎಸ್ ಆಗಿ ಡಿಐಜಿ ಹುದ್ದೆಗೆ ಏರಿದ ರಾಜ್ಯದ ಮೊದಲ ಅಧಿಕಾರಿ. ಪೊಲೀಸ್ ಇಲಾಖೆಗೆ ಘನತೆ, ಗೌರವ ತಂದುಕೊಟ್ಟು, ಮಾದರಿ ಮತ್ತು ಆದರ್ಶ ಅಧಿಕಾರಿಯಾಗಿ ಬಾಳಿದವರು ರೇವಣ್ಣಸ್ವಾಮಿಗಳು" ಎಂದು ವರ್ಣಿಸಿದರು.

## ಶ್ರೀದೇವಿ ಶಿಕ್ಷಣ ಸಂಸ್ಥೆ ಖಾಸಗಿ ವಿಶ್ವವಿದ್ಯಾನಿಲಯವಾಗಲಿ

ಮಾಜಿ ಸಚಿವ ಹಾಗೂ ಕರ್ನಾಟಕ ಸರ್ಕಾರದ ಗ್ಯಾರಂಟಿ ಸಮಿತಿಯ ಅಧ್ಯಕ್ಷರಾದ ಎಚ್.ಎಂ. ರೇವಣ್ಣ ಅವರು ಮಾತನಾಡುತ್ತಾ "ಗಟ್ಟಹಳ್ಳಿ ಅಂಜನಪ್ಪಸ್ವಾಮಿ ಆಶ್ರಮದ ಜಾಗವನ್ನು ಕಬಳಿಸಲು ಕೆಲವು ಪಟ್ಟಭದ್ರ ಹಿತಾಸಕ್ತಿ ಪ್ರಯತ್ನಿಸುತ್ತಿದ್ದು ಇದನ್ನು ಆಶ್ರಮದ ಆಸ್ತಿಯಾಗಿಯೇ ಉಳಿಸಲು ಸರ್ಕಾರದೊಂದಿಗೆ ಮಾತುಕತೆ ನಡೆಸುತ್ತೇನೆ. ಇದರ ಜೊತೆಗೆ ಶ್ರೀ ದೇವಿ ಸಮೂಹ ಶಿಕ್ಷಣ ಸಂಸ್ಥೆಯನ್ನು ಖಾಸಗಿ ವಿಶ್ವವಿದ್ಯಾಲಯವನ್ನಾಗಿ ಮಾಡಲು ಸರ್ವರೀತಿಯಲ್ಲೂ ಪ್ರಯತ್ನ ಮಾಡುತ್ತೇನೆ. ಶ್ರೀದೇವಿ ಶಿಕ್ಷಣ ಸಂಸ್ಥೆ ಆಗಾಧವಾಗಿ ಬೆಳೆದಿದೆ. ಅದು ಖಾಸಗಿ ವಿಶ್ವವಿದ್ಯಾನಿಲಯವಾಗಲು ಅಗತ್ಯವಾದ ಎಲ್ಲಾ ರೀತಿಯ ಅರ್ಹತೆಯನ್ನೂ ಪಡೆದಿದೆ" ಎಂದರು.

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ ಅವರು ಮಾತನಾಡುತ್ತಾ, "ಸಮಾಜದಲ್ಲಿ ಶಾಂತಿ, ಸಹಬಾಳ್ವೆ, ಸಮಾನತೆ ತರಲು 16ನೆಯ ಶತಮಾನದಲ್ಲಿ ಶ್ರೀ ವ್ಯಾಸರಾಯರು ಎಲ್ಲೆಡೆ ಶ್ರೀ ಹನುಮಂತದೇವರನ್ನು ಪ್ರತಿಷ್ಠಾಪಿಸಿದರು. ಅವನ ಪೂಜಾಕೈಂಕರ್ಯವನ್ನು ಎಲ್ಲಾ ಸಮಾಜದವರಿಗೂ ನೀಡಿದರು. ಇಂತಹ ಸಮಾನತೆಯ ಸಂದೇಶವನ್ನು ಸಂವಿಧಾನಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಸಹ ಸಾರಿದ್ದಾರೆ. ನಮ್ಮ ದೇಶದ ಅನೇಕ ಸಾಧು, ಸಂತರು ಮತ್ತು ದಾರ್ಶನಿಕರಲ್ಲಿ ಡಾ. ಅಂಬೇಡ್ಕರ್ ಅವರ ಸಮಾನತೆಯ ವಿಚಾರಧಾರೆ ಇರುವುದನ್ನು ನಾವು ಗುರುತಿಸಬೇಕಾಗಿದೆ. ಡಾ. ಕೆ.ಆರ್. ಕಮಲೇಶ್‌ಅವರು ಶ್ರೀ ಅಂಜನಪ್ಪಸ್ವಾಮಿಗಳ ಬದುಕಿನಲ್ಲಿ ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಗುರುತಿಸಿದ್ದಾರೆ. ಅವರ ಈ ಸಾಹಿತ್ಯಿಕ ಕಾರ್ಯಕ್ಕಾಗಿ ಸಮಸ್ತ ಕನ್ನಡಿಗರು ಹೆಮ್ಮೆಪಡಬೇಕಾಗಿದೆ" ಎಂದರು.

ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಎಂ.ಆರ್. ಹುಲಿನಾಯ್ಕರ್ ಮಾತನಾಡಿ, "ಉತ್ತಮ ಸಮಾಜದ ಆರೋಗ್ಯಕರ ವಿಚಾರಗಳು ಮತ್ತು ಗುರುಪರಂಪರೆಯ ಸಂದೇಶಗಳು ಅಧ್ಯಾತ್ಮದ ಅಡಿಯಲ್ಲಿ ಪ್ರಸಾರವಾಗಬೇಕು. ಅಧ್ಯಾತ್ಮ ಮತ್ತು ಲೌಕಿಕ ಜಗತ್ತಿನಲ್ಲಿ ತಮ್ಮದೇ ಆದ ಹೆಜ್ಜೆ ಗುರುತು ಮೂಡಿಸಿದ ದಾರ್ಶನಿಕರಿಗೆ ಕಳೆದ ನಾಲ್ಕು ವರ್ಷಗಳಿಂದ ಶ್ರೀದೇವಿ ರಮಣ ಮಹರ್ಷಿ ಪ್ರಶಸ್ತಿಯನ್ನು ನೀಡುತ್ತಾ ಗೌರವಿಸುತ್ತಾ ಬಂದಿದ್ದೇವೆ. 2020ನೆಯ ಸಾಲಿನಿಂದ ಈ ಪ್ರಶಸ್ತಿ ಪ್ರಾರಂಭಿಸಲಾಗಿದೆ. ಇಲ್ಲಿಯ ತನಕ ಶ್ರೀ ಸತ್–ಉಪಾಸಿ, ಶ್ರೀಎಂ., ಆಚಾರ್ಯ ಎಂ. ನಾಗರಾಜ್ ಮತ್ತು ಸರ್ವೋಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶರಾದ ಎಂ.ಎನ್. ವೆಂಕಟಾಚಲಯ್ಯ ಅವರಿಗೆ ಪ್ರದಾನ ಮಾಡಲಾಗಿದೆ" ಎಂದರು.

ಶ್ರೀದೇವಿ ರಮಣ ಮಹರ್ಷಿ ಪುರಸ್ಕಾರ 2025ಕ್ಕೆ ಭಾಜನರಾದ ಡಾ. ಬಿ.ಆರ್. ಜಯಮ್ಮ ಅವರಿಗೆ ಶಾಲು ಹೊದಿಸಿ, ಪುಷ್ಪಮಾಲೆ ಹಾಕಿ. ಫಲ, ತಾಂಬೂಲ, ರೇಷ್ಮೆಸೀರೆ, ಬಿನ್ನವತ್ತಳೆ, ನೆನಪಿನ ಕಾಣಿಕೆ, ಸ್ಮರಣಿಕೆ ಮತ್ತು ನಗದು ಕಾಣಿಕೆಯನ್ನು ನೀಡಿ ಅದ್ದೂರಿಯಿಂದ ಸನ್ಮಾನಿಸಲಾಯಿತು. ಶ್ರೀದೇವಿ ಟ್ರಸ್ಟ್‌ನ ಟ್ರಸ್ಟಿ ಡಾ. ಲಾವಣ್ಯ ರಮಣ್ ಅವರು ಬಿನ್ನವತ್ತಳೆಯನ್ನು ವಾಚನ ಮಾಡಿದರು. ಇದೇ ಸಂದರ್ಭದಲ್ಲಿ ಶ್ರೀ ಅಂಜನಪ್ಪಸ್ವಾಮಿಗಳು ಗ್ರಂಥದ ಲೇಖಕರಾದ ಡಾ. ಕೆ.ಆರ್. ಕಮಲೇಶ್ ಮತ್ತು ಅವರ ಮಡದಿ ಶ್ರೀಮತಿ ಎನ್. ಭಾರತಿ ಅವರನ್ನು ಸನ್ಮಾನಿಸಲಾಯಿತು. ಪ್ರಾರಂಭದಲ್ಲಿ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕ ಎಂ.ಎಸ್. ಪಾಟೀಲ್ ಅವರು ಸ್ವಾಗತ ಕೋರಿದರು. ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ನರೇಂದ್ರ ವಿಶ್ವನಾಥ್ ಅವರು ವಂದನಾರ್ಪಣೆ ಮಾಡಿದರು.

ಕಾರ್ಯಕ್ರಮದಲ್ಲಿ ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ಕಾಲೇಜಿನ ವೈದ್ಯಕೀಯ ನಿರ್ದೇಶಕ ಡಾ. ರಮಣ್ ಎಂ. ಹುಲಿನಾಯ್ಕರ್ ಹಾಗೂ ಶ್ರೀದೇವಿ ಶಿಕ್ಷಣ ಸಂಸ್ಥೆಯ ವಿವಿಧ ವಿಭಾಗದ ಮುಖ್ಯಸ್ಥರು ಹಾಜರಿದ್ದರು.

## ಡಾ. ಬಿ.ಆರ್.ಜಯಮ್ಮ ಅವರು ಬೆಳೆದು ಬಂದ ದಾರಿ

ಕಳೆದ 45 ವರ್ಷಗಳಿಂದಲೂ ಕೋಲಾರ ತಾಲ್ಲೂಕು ಗಟ್ಟಹಳ್ಳಿಯಂತಹ ಗ್ರಾಮೀಣ ಭಾಗದಲ್ಲಿ ಉಚಿತ ಆರೋಗ್ಯ ಶಿಬಿರದ ಮೂಲಕ ಅನೇಕ ರೋಗಿಗಳಿಗೆ ಸೇವೆ ಸಲ್ಲಿಸುತ್ತಿರುವ ಡಾ ಬಿ.ಆರ್. ಜಯಮ್ಮ ಅವರು ತಮ್ಮ ಬದುಕನ್ನು ಗ್ರಾಮೀಣ ಪ್ರದೇಶದ ರೋಗಿಗಳಿಗಾಗಿ ಮುಡುಪಾಗಿಟ್ಟಿದ್ದಾರೆ. ಜೊತೆಗೆ ಗಟ್ಟಹಳ್ಳಿ ಪೂಜ್ಯಶ್ರೀ ಅಂಜನಪ್ಪಸ್ವಾಮಿಗಳ ಶ್ರದ್ಧಾವಂತ ಅನುಯಾಯಿಗಳು. ಬೆಂಗಳೂರಿನ ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್ ಪದವಿ, ಅನಂತರ ಗೈನಕಾಲಜಿಯಲ್ಲಿ ಸ್ನಾತಕೋತ್ತರ ಪದವಿ ಗಳಿಸಿ ಸ್ವಲ್ಪಕಾಲ ಕರ್ನಾಟಕ ಸರ್ಕಾರದ ಆರೋಗ್ಯ ಇಲಾಖೆಯಲ್ಲಿ ವೈದ್ಯರಾಗಿ ಕೆಲಸ ಮಾಡಿ, ಅನಂತರ

ಹೆಚ್‌ಎಂಟಿ ಕಾರ್ಖಾನೆಯಲ್ಲಿ ಮೆಡಿಕಲ್ ಆಫೀಸರ್ ಆಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿದ್ದಾರೆ. ತಂದೆಯಂತೆ ಅವಧೂತ ಅಂಜನಪ್ಪಸ್ವಾಮಿಗಳ ಪರಂಪರೆಯನ್ನು ಮುಂದುವರಿಸಿಕೊಂಡು ಬರುತ್ತಿರುವ ಡಾ. ಜಯಮ್ಮ ಅವರಿಗೆ 2025ನೇ ಸಾಲಿನ "ಶ್ರೀದೇವಿ ರಮಣ ಮಹರ್ಷಿ ಪುರಸ್ಕಾರ" ನೀಡಿ ಗೌರವಿಸಲಾಗಿದೆ. ಇವರ ಸಹೋದರ ದಿವಂಗತ ಡಾ. ಬಿ.ಆರ್. ರಾಮಕೃಷ್ಣ ಅವರು ಅಮೆರಿಕಾದಲ್ಲಿ ಅಂತಾರಾಷ್ಟ್ರೀಯ ಖ್ಯಾತಿಯ ಆರ್ಥೋವೈದ್ಯರಾಗಿ ಪ್ರಸಿದ್ಧರಾಗಿದ್ದರು. ಅವರ ಮಗಳು ಸುನಿತಾ ರಾಮಕೃಷ್ಣ ಅಮೆರಿಕಾ ಹೈಕೋರ್ಟ್ ನ್ಯಾಯಾಧೀಶರಾಗಿ ಕೆಲಸ ಮಾಡುತ್ತಿದ್ದಾರೆ. ಹಿಂದೆ ಅವರು ಅಮೆರಿಕಾದ ಅಧ್ಯಕ್ಷರಾಗಿದ್ದ ಜಾರ್ಜ್‌ಬುಷ್ ಅವರಿಗೆ ಕಾನೂನು ಸಲಹೆಗಾರರಾಗಿ ಕರ್ತವ್ಯ ನಿರ್ವಹಿಸಿದ್ದರು. ಡಾ. ಜಯಮ್ಮ ಅವರು ತಮ್ಮ ಕುಟುಂಬದ ಶ್ರೇಯಸ್ಸಿಗೆ ಗಟ್ಟಹಳ್ಳಿ ಶ್ರೀ ಬಾಲಾಂಜನೇಯಸ್ವಾಮಿಯ ಕೃಪಕಟಾಕ್ಷ ಕಾರಣವೆಂದು ಅಚಲವಾಗಿ ನಂಬಿದ್ದಾರೆ.



ಕಲಬುರಗಿ ಲೋಕಸಭಾ ಸದಸ್ಯ ರಾಧಾಕೃಷ್ಣ ದೊಡ್ಡಮನಿ ಅವರಿಗೆ ಸನ್ಮಾನ.

> ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಎಂ. ಆರ್. ಹುಲಿನಾಯ್ಕರ್ ದಂಪತಿಗಳ ಎಲ್ಲ ಕೆಲಸ ಕಾರ್ಯಗಳಲ್ಲಿ ದೇವಿಯ ಉಪಾಸನೆಯಿದೆ. ಅವರ ಸಾಧನೆ, ನೆಮ್ಮದಿ, ಆರೋಗ್ಯಕರ ಜೀವನ ಮತ್ತು ವೃತ್ತಿಯಲ್ಲಿನ ಯಶಸ್ಸಿಗೆ ದೇವಿಯ ಆಶೀರ್ವಾದವೇ ಪ್ರಮುಖ ಕಾರಣವಾಗಿದೆ. ಇದು ಅವರ ಚಿಂತನೆ ಮತ್ತು ವಿಶಾಲ ಮನೋಭಾವಕ್ಕೆ ಹಿಡಿದ ಕನ್ನಡಿ. ಅವರ ವ್ಯಕ್ತಿತ್ವವೇ ಇದನ್ನು ಸಾಬೀತುಪಡಿಸುತ್ತದೆ. ಅವರು ಸಮಾಜದಿಂದ ಪಡೆದದ್ದಕ್ಕಿಂತ ಹೆಚ್ಚನ್ನು ಸಮಾಜಕ್ಕೆ ನೀಡಿ ಇತರರ ಬದುಕಿಗೆ ಆದರ್ಶವಾಗಿದ್ದಾರೆ.
>
> – ಸ್ವಾಮಿ ಯೋಗೀಶ್ವರಾನಂದ
> ರಾಮಕೃಷ್ಣ ಯೋಗಾಶ್ರಮ, ರಾಮೋಹಳ್ಳಿ, ಕೆಂಗೇರಿ.

> ಹುಲಿ ಅರಣ್ಯಕ್ಕೆ ರಾಜ. ಅದೇ ರೀತಿ ಶಿಕ್ಷಣ ಮತ್ತು ವೈದ್ಯಕೀಯ ವಲಯದಲ್ಲಿ ಹೆಜ್ಜೆ ಗುರುತು ಮೂಡಿಸಿ, ಮಾನವೀಯತೆಗೆ ಹೆಸರಾದ ಡಾ. ಹುಲಿನಾಯ್ಕರ್ ನಮಗೆಲ್ಲ ರಾಜರಾಗಿದ್ದಾರೆ. 'ಗಟ್ಟಹಳ್ಳಿ ಶ್ರೀಅಂಜನಪ್ಪಸ್ವಾಮಿಗಳು ಮತ್ತು ಅವರ ಪರಂಪರೆ' ಕೃತಿ ನಾಡಿನ ಶ್ರೇಷ್ಠ ಸಂಶೋಧನಾ ಗ್ರಂಥ. ಕೋಲಾರ ಜಿಲ್ಲೆಯ ಮಣ್ಣಿನಲ್ಲಿ ಎಂತಹ ದೈತ್ಯಶಕ್ತಿಯಿದೆ. ಪವಾಡವಿದೆ. ಎಂಬುದನ್ನು ಲೇಖಕರು ಸಮಗ್ರವಾಗಿ ಕಟ್ಟಿಕೊಟ್ಟಿದ್ದಾರೆ. ಅವರ ಸಾಹಿತ್ಯ ಸಂಗೀತದ ಮಹತ್ವ ತಿಳಿಸುವ ಅಪೂರ್ವ ಕೃತಿಯಾಗಿದೆ.
>
> – ಡಿ.ಡಿ. ಮಾಳಗಿ, ಅಧ್ಯಾತ್ಮ ಚಿಂತಕ.

> ಶಿಕ್ಷಣದ ಜೊತೆಗೆ ಅಧ್ಯಾತ್ಮ ವಿಚಾರಧಾರೆ ಇಂದಿನ ಯುವಪೀಳಿಗೆಗೆ ಮನವರಿಕೆ ಮಾಡಿಕೊಡುವ ಉದ್ದೇಶದಿಂದ ಜಾತಿ, ಮತ ಭೇದವಿಲ್ಲದೆ ಪ್ರತಿ ವರ್ಷ ಯಾವುದೇ ಸಮುದಾಯದ ಸಾಧಕರಿಗೆ ಶ್ರೀದೇವಿ ರಮಣ ಮಹರ್ಷಿ ಪುರಸ್ಕಾರವನ್ನು ನೀಡಲಾಗುತ್ತಿದೆ. ಸಮಾಜವನ್ನು ಸರಿಯಾದ ಮಾರ್ಗದಲ್ಲಿ ತೆಗೆದುಕೊಂಡು ಹೋಗುವ ಶಕ್ತಿ ದಾರ್ಶನಿಕರಿಗೆ, ಮಹರ್ಷಿಗಳಿಗಿದೆ. ಹೀಗಾಗಿ ಶಿಕ್ಷಣದ ಜೊತೆ ಅಧ್ಯಾತ್ಮ ಸಮ್ಮಿಲನವಾಗಬೇಕು. ಉತ್ತಮ ಸಮಾಜಕ್ಕೆ, ಆರೋಗ್ಯಕ್ಕೆ ಉತ್ತಮ ವಿಚಾರಧಾರೆ ಅಧ್ಯಾತ್ಮದ ಮೂಲಕವೇ ಪ್ರಸಾರವಾಗಬೇಕು ಎಂಬ ಕಾರಣಕ್ಕಾಗಿಯೇ 2020 ನೇ ಸಾಲಿನಿಂದ ಈ ಪ್ರಶಸ್ತಿ ಪ್ರಾರಂಭಿಸಲಾಗಿದೆ.
>
> – ಡಾ. ಎಂ.ಆರ್. ಹುಲಿನಾಯ್ಕರ್, ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರು

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Dr M R Hulinaykar**